ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 7 ಫೆಬ್ರವರಿ 17, 1980 40 ಪೈಸೆ

ಕರ್ನಾಟಕದ ಗಡಿ ಮತ್ತು ಕನ್ನಡಿಗರಿಗೆ ಉದ್ಯೋಗ

ಕರ್ನಾಟಕದ ಹೊಸ ಮುಖ್ಯಮಂತ್ರಿಯಾದ ಶ್ರೀ ಗುಂಡೂರಾಯರು ತಾವು ಮುಖ್ಯಮಂತ್ರಿಯಾದ ಕೆಲವೇ ದಿನಗಳಲ್ಲಿ ಕೆಲವು ಸಮಸ್ಯೆಗಳ ತಮ್ಮ ಅಭಿಪ್ರಾಯಗಳನ್ನು ಬಹಿರಂಗಪಡಿಸಿದ್ದಾರೆ. ಅವು ನಮ್ಮ ನೆರೆ ರಾಜ್ಯಗಳ ಜೊತೆಗೆ ತೀವ್ರ ವಿವಾದಕ್ಕೆಡೆಕೊಟ್ಟಿದೆ. ಕಾಸರಗೋಡು ತಾಲ್ಲೂಕನ್ನು ಕರ್ನಾಟಕಕ್ಕೆ ಕೂಡಲೇ ಸೇರಿಸಬೇಕೆಂದೂ, ಕರ್ನಾಟಕದ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಹೆಚ್ಚು ಕೆಲಸ ದೊರೆಯಬೇಕೆಂದೂ, ಹೊಸ ಕೈಗಾರಿಕೆಗಳಲ್ಲಿ ನೂರಕ್ಕೆ ನೂರರಷ್ಟು ಕನ್ನಡಿಗರಿಗೆ ಉದ್ಯೋಗ ಕೊಡಬೇಕೆಂದೂ ತಮ್ಮ ಸಲಹೆ ನೀಡಿದ್ದಾರೆ.

ಕಾಸರಗೋಡು ಸಮಸ್ಯೆ ಒಂದು ಪ್ರತ್ಯೇಕ ಸಮಸ್ಯೆಯಲ್ಲ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಬೆಳಗಾವಿಯ ಪ್ರಶ್ನೆಯೂ ಇದೆ. ನಮ್ಮ ದೇಶದಲ್ಲಿ ಇನ್ನೂ ಅನೇಕ ರಾಜ್ಯಗಳ ನಡುವಿನ ಗಡಿ ವಿವಾದಗಳಿವೆ. 1956ರಲ್ಲಿ ರಾಜ್ಯಗಳ ಪುನರ್ವಿಂಗಡನೆಯಾದಾಗ ಈ ಸಮಸ್ಯೆಗಳು ಶಾಸನ ಸಭೆಗಳಲ್ಲೂ, ಲೋಕಸಭೆಯಲ್ಲೂ ಚರ್ಚೆಯಾಗಿದ್ದುವು. ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದವು ತೀವ್ರಗೊಂಡಾಗ ಕೇಂದ್ರ ಮಹಾಜನ್ ಆಯೋಗವನ್ನು ನೇಮಕ ಮಾಡಿ ಅದರ ವರದಿಯೂ ಬಂತು. ಆದರೆ ಕೇಂದ್ರ ಸರಕಾರ ಅದನ್ನು ಮೂಲೆಗೆ ಹಾಕಿ ಸುಮ್ಮನೆ ಕುಳಿತಿದೆ. ಕಾರಣವೇನೆಂದರೆ ಈ ವರದಿಯನ್ನು ಕರ್ನಾಟಕ ಸರಕಾರ ಒಪ್ಪಿದರೂ ಮಹಾರಾಷ್ಟ್ರ ಅದನ್ನು ತಿರಸ್ಕರಿಸಿತು.

ಸಂಪಾದಕೀಯ

ಗಡಿಗಳ ಬಗ್ಗೆ ನಮ್ಮ ಪಾರ್ಟಿ ಒಂದು ಸ್ಪಷ್ಟವಾದ ಮತ್ತು ವೈಜ್ಞಾನಿಕವಾದ ನಿಲುವನ್ನು ಅನುಸರಿಸಿದೆ. ಗ್ರಾಮಘಟಕವನ್ನಾಗಿಟ್ಟುಕೊಂಡು ಅಲ್ಲಿಯ ಬಹುಸಂಖ್ಯಾತ ಜನ ಯಾವ ಭಾಷೆಯನ್ನಾಡುತ್ತಾರೋ ಅದರ ಆಧಾರದಲ್ಲಿ ಅದು ಆ ಭಾಷೆಯನ್ನಾಡುವ ರಾಜ್ಯಕ್ಕೆ ಹೊಂದಿಕೊಂಡಿದ್ದರೆ ಆ ಗ್ರಾಮವನ್ನು ಸಂಬಂಧಪಟ್ಟ ರಾಜ್ಯಕ್ಕೆ ಸೇರಿಸಬೇಕೆಂಬುದು ನಮ್ಮ ಪಾರ್ಟಿಯ ನಿಲುವು. ಇದನ್ನು ನಮ್ಮ ಪಾರ್ಟಿ ಆರಂಭದಿಂದಲೂ ಪ್ರತಿಪಾದಿಸಿದೆ. ಆದರೆ ರಾಜ್ಯ ಪುನರ್ವಿಂಗಡನಾ ಆಯೋಗವಾಗಲಿ, ಕೇಂದ್ರ ಮತ್ತು ರಾಜ್ಯ ಸರಕಾರಗಳಾಗಲಿ ಇದನ್ನೊಪ್ಪಲು ತಯಾರಿರಲಿಲ್ಲ. ಆದ್ದರಿಂದ ಕಾಸರಗೋಡಿನ ಪ್ರಶ್ನೆಯೆತ್ತುವಾಗ ಅದನ್ನು ಸಮಗ್ರ ಗಡಿ ವಿಂಗಡನೆಯ ಪ್ರಶ್ನೆಯಾಗಿ ತೆಗೆದುಕೊಳ್ಳಬೇಕೇ ಹೊರತು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಅಚ್ಚ ಕನ್ನಡ ಪ್ರದೇಶಗಳು ನಮ್ಮ ರಾಜ್ಯಕ್ಕೆ ಸೇರಬೇಕೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ನಮ್ಮ ಮುಖ್ಯಮಂತ್ರಿಯವರ ಹೇಳಿಕೆಗಳಿಂದ ನಮಗೆ ಅನುಕೂಲವಾಗುವ ಬದಲು ಹಾನಿಯಾಗುವ ಸಂಭವವೇ ಜಾಸ್ತಿ.

ಹಾಗೆಯೇ ನಮ್ಮವರಿಗೇ ಉದ್ಯೋಗ ಸಿಗಬೇಕೆಂಬ ಪ್ರಶ್ನೆಯೂ ತೋರಿಕೆಗೆ ನಿರ್ವಿವಾದವೆಂದು ಕಂಡರೂ ಇದರ ಬಗ್ಗೆ ತೀವ್ರ ಸಂಕುಚಿತ ನೀತಿಯಿಂದ ಅನಾಹುತವಾಗಬಹುದು. ಮಹಾರಾಷ್ಟ್ರದಲ್ಲಿ ಶಿವಸೇನೆಯು

(ಕಡೆಯ ಪುಟ ನೋಡಿ)

ಜನರ ಗಮನವನ್ನು ಬೇರೆಡೆಗೊಯ್ಯುವ ಪ್ರಯತ್ನ

ಇತ್ತೀಚೆಗಿನ ದಿನಗಳಲ್ಲಿ ಕರ್ನಾಟಕ ರಾಜ್ಯದ ಕಾಂಗ್ರೆ ಮುಖ್ಯಮಂತ್ರಿ ಶ್ರೀ ಗುಂಡೂರಾಯರು ಮಾತನಾಡುವ ಧಾಟಿ ಮತ್ತು ನಡೆದುಕೊಳ್ಳುವ ಕ್ರಮಗಳನ್ನು ನೋಡಿದಲ್ಲಿ, ಇವರು ಜನತೆಯ ಗಮನವನ್ನು ಸಮಸ್ಯೆಗಳಿಂದ ದೂರ ಕೊಂಡೊಯ್ಯಲು ಪ್ರಯತ್ನಿಸುವಂತೆ ಕಾಣುತ್ತದೆ. ನೆರೆ ರಾಜ್ಯಗಳೊಂದಿಗೆ ಇರುವ ಗಡಿಗಳಲ್ಲಿನ ವಿವಾದಗಳನ್ನು ಕೆದಕಿ ಹಾಕುವ ರೀತಿಯ ಇವರ ವರ್ತನೆಯು ತುಂಬಾ ಕಳವಳವನ್ನುಂಟು ಮಾಡುತ್ತಿದೆ. ರಾಜ್ಯದಲ್ಲಿನ ಜನತೆಯ ಆರ್ಥಿಕ-ಸಾಮಾಜಿಕ ಸಮಸ್ಯೆಗಳ ಪರಿಹಾರದತ್ತ ಆದ್ಯಗಮನವನ್ನೀಯಬೇಕಾದ ಈ ಸಂದರ್ಭದಲ್ಲಿ, ಮುಖ್ಯಮಂತ್ರಿಯವರು ಅನುಸರಿಸುವ ಕ್ರಮವು ಜನರ ಮನಸ್ಸನ್ನು ಬೇರೆಡೆಗೊಯ್ಯುವಂತಿದೆ. ಹಾಗೆಯೇ ತನ್ನ ಪಕ್ಷದಲ್ಲಿರುವ ಆಂತರಿಕ ತಿಕ್ಕಾಟ ಮತ್ತು ಗೊಂದಲಗಳನ್ನು ಮರೆಮಾಚಲೂ ಹಾಕಿದ ತಂತ್ರವಿದಾಗಿದೆ.

ಇತ್ತೀಚೆಗೆ ಕೇರಳದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ಒಕ್ಕೂಟವು ಅಧಿಕಾರಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರು ಹೇಳುವುದನ್ನು ನೋಡಿದಾಗ, ಗಡಿವಿವಾದದ ಮೂಲಕ ಗೊಂದಲವನ್ನುಂಟು ಮಾಡಿ ಎಡ ಪ್ರಜಾಪ್ರಭುತ್ವ ಕೂಟದ ಸರಕಾರದ ಮೇಲೆ ಜನತೆಗಿರುವ ಉತ್ತಮ ಅಭಿಪ್ರಾಯವನ್ನು ಹಾಳು ಮಾಡಲು ಎಂಬಂತಿದೆ. ಭಾಷಾವಾರಾಗಿ ರಾಜ್ಯಗಳ ವಿಂಗಡನೆ ಆಗಿರುವುದರಿಂದ ಗಡಿಪ್ರದೇಶದ ಜನರಿಗೆ ತೊಂದರೆ ಆಗುವುದು ಸಹಜ. ಆದರೆ ಈ ತೊಂದರೆಗಳ ನಿವಾರಣೆಗೆ ಮತ್ತು ಸಮಸ್ಯೆಗಳಿದ್ದರೆ ಪರಿಹಾರಕ್ಕಾಗಿ ಸಂಬಂಧಿಸಿದ ರಾಜ್ಯಗಳ ಸರಕಾರಗಳೂ, ಕೇಂದ್ರ ಸರಕಾರವೂ ಮತ್ತು ಎಲ್ಲಾ ಪಕ್ಷಗಳ ಹಾಗೂ ಜನತೆಯ ಪ್ರತಿನಿಧಿಗಳೂ ಒಟ್ಟಿಗೆ ಸೇರುವಂತೆ ಮಾಡಿ ಪರಿಹಾರ ಹುಡುಕಬೇಕು. ಆದರೆ ಅದರ ಬದಲು ಜನತೆಯನ್ನು ಪ್ರಚೋದಿಸುವ ಮುಖ್ಯಮಂತ್ರಿಯವರ ಮಾತುಗಳಿಂದ ಈ ರಾಜ್ಯದಲ್ಲೂ, ನೆರೆರಾಜ್ಯಗಳಲ್ಲೂ ಜನತೆಯು ಭಾವೋದ್ರೇಕಕ್ಕೊಳಗಾಗಿ ಹಿಂಸಾತ್ಮಕ ರೂಪದ ಚಳವಳಿ ನಡೆಯುವ ಅಪಾಯವಿದೆ.

ಇದೇ ರೀತಿ ರಾಜ್ಯದ ಉನ್ನತ ಅಧಿಕಾರಿಗಳಿಗೆ ಮುಖ್ಯ ಮಂತ್ರಿಯವರು ಮದ್ಯ ಸೇವನೆ ಮಾಡಲು ಮತ್ತು ಶ್ರೀಮಂತರಿಂದ ಲಂಚ ತೆಗೆದುಕೊಳ್ಳಲು ಕೊಟ್ಟ ಹಿತವಚನ, ಹಾವನೂರು ವರದಿಯ ಸಲಹೆ ಮೇರೆಗೆ ಮಾಡಲಾದ ಮೀಸಲಾತಿ ಬಗ್ಗೆ ಪುನರ್ವಿಮರ್ಶೆ ಮಾಡಬೇಕೆಂದು ಹೇಳುವ ಧಾಟಿ-ಇವೆಲ್ಲಾ ಅಪಾಯಕಾರಿ ಪರಿಣಾಮಗಳಿಂದ ಕೂಡಿವೆ.

ಸಂಕುಚಿತ ಭಾವನೆಗಳಿಗೂ, ಜನರ ಗಮನವನ್ನು ಬೇರೆಡೆಗೊಯ್ಯುವ ಈ ತಂತ್ರಗಳಿಗೆ ಬಲಿಯಾಗದಂತೆ ಎಚ್ಚರದಿಂದಿರಲು ಕರ್ನಾಟಕದ ಜನತೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆಯೀಯುತ್ತದೆ. ೦

ಸರ್ವಾಧಿಕಾರದ ವಿರುದ್ಧ ಸಮರಕ್ಕೆ ಸಮರ್ ಮುಖರ್ಜಿ ಕರೆ

ರಾಷ್ಟ್ರದ ಚುಕ್ಕಾಣಿಯನ್ನು ಮತ್ತೆ ಹಿಡಿದಿರುವ ಸರ್ವಾಧಿಕಾರಿ ಶಕ್ತಿಯನ್ನು ಹೋರಾಡುವ ದೊಡ್ಡ ಜವಾಬ್ದಾರಿಯ ಕೆಲಸ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಇಂದು ಬಿದ್ದಿದೆ ಎಂದು ಲೋಕಸಭೆಯಲ್ಲಿನ ಸಿ.ಪಿ.ಐ. (ಎಂ) ನಾಯಕ ಕಾಂ. ಸಮರ್ ಮುಖರ್ಜಿಯವರು ಫೆ. 13 ರಂದು ಬೆಂಗಳೂರಿನಲ್ಲಿ ಹೇಳಿದರು.

ಬೆಂಗಳೂರು ಜಿಲ್ಲಾ ಸಿ. ಪಿ. ಐ. (ಎಂ) ಏರ್ಪಡಿಸಿದ್ದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಸಿ. ಪಿ. ಐ. (ಎಂ) ನಾಯಕ ಕಾಂ. ಸಮರ್ ಮುಖರ್ಜಿಯವರು ಕಳೆದ ಲೋಕಸಭಾ ಚುನಾವಣೆ ಮತ್ತು ಅದರ ಫಲಿತಾಂಶಗಳನ್ನು ವಿವರವಾಗಿ ವಿಶ್ಲೇಷಿಸಿದರು. ಜನತಾ ಪಕ್ಷವು 1977ರ ಚುನಾವಣೆಯಲ್ಲಿ ಜನತೆಗೆ ಕೊಟ್ಟಿದ್ದ ವಚನಗಳನ್ನು ಪಾಲಿಸದೆ ಜನವಿರೋಧಿ ನೀತಿಗಳನ್ನು ಅನುಸರಿಸಿದ್ದರಿಂದ ಮತ್ತು ತನ್ನೊಳಗಿನ ತೀವ್ರ ರೀತಿಯ ಆಂತರಿಕ ಕಚ್ಚಾಟದಿಂದ ಜನತಾ ಸರ್ಕಾರ ಬಿದ್ದು ಹೋಗಬೇಕಾಯಿತು ಎಂದರು. ಜನತಾಪಕ್ಷದ ನಿಷ್ಕ್ರಿಯತೆ ಒಂದು ಕಡೆ ಮತ್ತು ಕಾಂಗ್ರೆಸ್ (ಐ) ಹಾಗೂ ಜನತಾಗೆ ಪ್ರಭಲವಾದ ಪರ್ಯಾಯ ಇಲ್ಲದಿದ್ದುದು ಮತ್ತೊಂದು ಕಡೆ-ಈ ಎರಡೂ ಅಂಶಗಳು ಮತ್ತೊಮ್ಮೆ ಇಂದಿರಾಗಾಂಧಿಯ ಕಡೆ ತಿರುಗಿ ನೋಡುವಂತೆ ಜನತೆಯನ್ನು ಪ್ರೇರೇಪಿಸಿದವು ಎಂದರು ಮುಖರ್ಜಿ. ಕಳೆದ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಗಾಂಧಿ ಪಕ್ಷಕ್ಕೆ ಶೇ. 42.5 ರಷ್ಟು ಮಾತ್ರ ಮತ ಸಿಕಿದ್ದು ಆಕೆಯ ವಿರುದ್ಧ ಶೇ 56.5 ರಷ್ಟು ಮತ ಬಿದ್ದಿರುವುದನ್ನು ಮರೆಯಬಾರದು ಎಂದು ನೆನಪು ಮಾಡಿಕೊಟ್ಟ ಮಾರ್ಕ್ಸ್‌ವಾದಿ ನಾಯಕರು ಈ ವಿರೋಧ ಮತವೇ ಸರ್ವಾಧಿಕಾರದ ವಿರುದ್ಧದ ಹೋರಾಟದಲ್ಲಿ ಪ್ರಭಲ ಶಕ್ತಿಯಾಗುವಂತೆ ಮಾರ್ಪಡಿಸಬೇಕು ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ಕೊಟ್ಟರು.

ದೋಷಪೂರಿತ ಚುನಾವಣಾ ಪದ್ಧತಿ:

ನಮ್ಮ ದೇಶದ ಚುನಾವಣೆಗಳಲ್ಲಿ ಶೇ. 50 ರಷ್ಟು ಜನರು ಭಾಗವಹಿಸುವುದೇ ಇಲ್ಲ. ಇನ್ನು ಉಳಿದ 50 ರಲ್ಲಿ ಶೇ. 42 ರಷ್ಟು ಜನ ಮಾತ್ರ ಇಂದಿರಾ ಕಾಂಗ್ರೆಸ್ಸಿಗೆ ಮತ ಹಾಕಿದ್ದಾರೆ ಮತ್ತು ಶೇ. 58 ರಷ್ಟು ಆಕೆಯ ಪಕ್ಷದ ವಿರುದ್ಧ ಹಾಕಿದ್ದಾರೆ-ಅಂದರೆ ಒಟ್ಟಾರೆಯಾಗಿ ಶೇ. 20ರಷ್ಟೂ ಬೆಂಬಲ ಪಡೆಯದ ಪಕ್ಷವೊಂದು ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಸೀಟುಗಳನ್ನು ಪಡೆಯುವ ವಿಪರ್ಯಾಸದತ್ತ ಜನತೆಯ ಗಮನ ಸೆಳೆದ ಸಮರ ಮುಖರ್ಜಿ ಇದನ್ನು ತಪ್ಪಿಸಲು ಪ್ರಮಾಣವಾರು ಪ್ರಾತಿನಿಧ್ಯವೇ ಸರಿಯಾದ ಕ್ರಮ ಎಂದರು. ಈ ಕ್ರಮಕ್ಕಾಗಿ ಸಿ. ಪಿ. ಐ. (ಎಂ) ಬಹಳ ದೀರ್ಘಕಾಲದಿಂದ ಹೋರಾಟ ಮಾಡಿಕೊಂಡು ಬರುತ್ತಿದೆ ಮತ್ತು ಈ ಹೋರಾಟಕ್ಕೆ ಹಲವು ವಿರೋಧ ಪಕ್ಷಗಳ ಬೆಂಬಲ ಇದೆ; ದಿವಂಗತ ಜೆ. ಪಿ. ಯವರೂ ಸಹ ಈ ಬೇಡಿಕೆಯನ್ನು ಬೆಂಬಲಿಸಿದ್ದರು ಎಂದು ಸಮರ್ ಮುಖರ್ಜಿ ನುಡಿದರು.

ಕಳೆದ 32 ವರ್ಷಗಳಿಂದ ಕಾಂಗ್ರೆಸ್ ಮತ್ತು ಜನತಾ ಪಕ್ಷಗಳು ಅನುಸರಿಸಿಕೊಂಡು ಬಂದ ಬಂಡವಾಳಶಾಹಿ, ಜಮೀನ್ದಾರರ ಪರವಾದ ಆರ್ಥಿಕ ನೀತಿಗಳೇ ದೇಶದ ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳಿಗೆ ಕಾರಣವೆಂದು ಸ್ಪಷ್ಟವಾಗಿ ಸಾರಿದ ಸಿ.ಪಿ.ಐ(ಎಂ) ನಾಯಕರು, ಆರ್ಥಿಕ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ತರದಿದ್ದರೆ ದೇಶದ ಮೂಲ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ ಎಂದರು. ಆಮೂಲಾಗ್ರ ಬದಲಾವಣೆಯಲ್ಲಿ ಅಚಲವಾಗಿ ನಂಬಿಕೆ ಇಟ್ಟಿರುವ ಮತ್ತು ಆ ದಿಸೆಯತ್ತ ದುಡಿಯುತ್ತಿರುವ ಎಡ ಪಕ್ಷಗಳಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ.ಪಿ.ಐ.

[ಕಡೆಯ ಪುಟ ನೋಡಿ]

ಕೇರಳದ ಆಡಳಿತದಲ್ಲಿ ಹೊಸ ವಿಧಾನ

ಕೇರಳ ರಾಜ್ಯದ ಆಡಳಿತೆ ಸುಗಮವಾಗಿಯೂ ಅತ್ಯಂತ ದಕ್ಷತೆಯಿಂದಲೂ ನಡೆಸಲು, ಮಾರ್ಕ್ಸ್‌ವಾದಿ ನೇತೃತ್ವದ ಆಳುವ ಎಡ ಹಾಗೂ ಪ್ರಜಾಪ್ರಭುತ್ವವಾದಿ ಎಡರಂಗದ ಏಳೂ ಪಕ್ಷಗಳು ರಾಜ್ಯದ ಆಡಳಿತೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ರಾಜ್ಯ, ಜಿಲ್ಲೆ ಮತ್ತು ವಿಧಾನಸಭೆಯ ಕ್ಷೇತ್ರದ ಮಟ್ಟದಲ್ಲಿ ಈ ಏಳೂ ಪಕ್ಷಗಳ ಸಮಾನ ಸಂಖ್ಯೆಯ ಸದಸ್ಯರಿರುವ ಜಂಟಿ ಸಮಿತಿಗಳನ್ನು ರಚಿಸಲು ಇತ್ತೀಚೆಗೆ ಈ ಪಕ್ಷಗಳ ನೇತಾರರು ನಿರ್ಣಯಿಸಿರುವರು.

ರಾಜ್ಯ ಮಟ್ಟದಲ್ಲಿ ಪ್ರತಿಯೊಂದು ಪಕ್ಷದಿಂದ ಮೂವರು ಸದಸ್ಯರಂತೆ 21 ಮಂದಿ ಸದಸ್ಯರ ಜಂಟಿ ಸಮಿತಿಯನ್ನು ನೇಮಿಸಲಾಗುವುದು. ಈ ಸಮಿತಿಯ ನಿರ್ಣಯಗಳಂತೆ ಕಾರ್ಯನಿರ್ವಹಿಸಲು ಪ್ರತಿಯೊಂದು ಪಕ್ಷದಿಂದ ಒಬ್ಬರು ಸದಸ್ಯರಿರುವ 7 ಮಂದಿ ಸದಸ್ಯರಿರುವ ರಾಜ್ಯ ಸೆಕ್ರೆಟೇರಿಯಟ್‌ನ್ನೂ ನೇಮಿಸಲಾಗುವುದು. ರಾಜ್ಯಸಮಿತಿಯಲ್ಲಿ ಪ್ರತಿಯೊಂದು ಪಕ್ಷದಿಂದ ಭಾಗವಹಿಸಲಿರುವ ಮೂವರು ಸದಸ್ಯರಲ್ಲಿ ಒಬ್ಬರು ಮಂತ್ರಿಯು ಔಪಚಾರಿಕ (ex-officio) ಸದಸ್ಯರಾಗಿಯೂ ಇಬ್ಬರು ಇತರ ಸದಸ್ಯರೂ ಇರುವರು. ಸಿ. ಪಿ. ಐ. (ಎಂ)ನ ಕಾಂ. ಪಿ. ವಿ. ಕುನ್ಹಿಕಣ್ಣನ್ ಈ ರಾಜ್ಯಸಮಿತಿಯ ಸಂಚಾಲಕರಾಗಲಿರುವರು.

ಪ್ರತಿಯೊಂದು ಜಿಲ್ಲೆ ಮತ್ತು ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿಯೂ ಆಳುವ ಏಳು ಪಕ್ಷಗಳ ಎರಡೆರಡು ಸದಸ್ಯರಿರುವ ಪ್ರಾದೇಶಿಕ ಸಮಿತಿಗಳನ್ನೂ ರಚಿಸಲಾಗುವುದು. ಎಲ್ಲಾ ಪಕ್ಷಗಳ ಪ್ರತಿನಿಧಿಗಳು ಇಲ್ಲದಿರುವಲ್ಲಿ ಉಳಿದ ಪಕ್ಷಗಳ ಸದಸ್ಯರಷ್ಟೇ ಇರುವ ಚಿಕ್ಕ ಸಮಿತಿಗಳನ್ನು ರಚಿಸಲಾಗುವುದು.

ಕೇರಳ ರಾಜ್ಯದ ಆಡಳಿತೆಯಲ್ಲಿ ಇದೊಂದು ಹೊಸ ವಿಧಾನ. ಇದು ತನಕ ಸಿ. ಪಿ. ಐ. (ಎಂ), ಸಿ. ಪಿ. ಐ., ಕಾಂಗ್ರೆಸ್ ನೇತೃತ್ವದ ಸಂಯುಕ್ತ ರಂಗ ಸರಕಾರಗಳ ಆಡಳಿತೆಯು ಪಕ್ಷಗಳ ರಾಜ್ಯ ಮಟ್ಟದ ಸಂಪರ್ಕ ಅಥವಾ ಸಹಕಾರ ಸಮಿತಿಗಳ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು. ಆ ಸಮಿತಿಗಳಲ್ಲಿ ವಿಧಾನಸಭೆಯಲ್ಲಿ ಪ್ರತೀ ಪಕ್ಷದ ಬಲಾಬಲಕ್ಕನುಗುಣವಾಗಿ ಪ್ರತಿನಿಧಿಗಳು ಇರುತ್ತಿದ್ದರು. ಇದರಿಂದಾಗಿ, ದೊಡ್ಡ ಮತ್ತು ಸಣ್ಣ ಪಕ್ಷಗಳೊಳಗೆ ಆಗಾಗ ವಿರಸಗಳೂ ಘರ್ಷಣೆಗಳೂ ಉಂಟಾಗುತ್ತಿದ್ದವು. ಹೊಸ ವಿಧಾನದಲ್ಲಿ ಇಂತಹ ಘರ್ಷಣೆಗಳಿಗೆ ಹೆಚ್ಚು ಆಸ್ಪದವಿರಲಾರದು. ಅಲ್ಲದೆ, ಇದುತನಕ ಜಿಲ್ಲೆ ಮತ್ತು ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿ ಆಳುವ ಪಕ್ಷಗಳ ಜಂಟಿ ಸಮಿತಿಗಳು ಇಲ್ಲದೆ ಪ್ರಾದೇಶಿಕ ಮಟದಲ್ಲಿ ಸಾಕಷ್ಟು ಹೊಂದಾಣಿಕೆ ಇಲ್ಲದೆ ಘರ್ಷಣೆಗಳಿಗೆ ಆಸ್ಪದವಿದ್ದು, ಹೊಸ ವಿಧಾನದಲ್ಲಿ ಹೆಚ್ಚಿನ ಸಹಕಾರ, ತಿಳುವಳಿಕೆ, ಹೊಂದಾಣಿಕೆ ಏರ್ಪಡುವ ಸಾಧ್ಯತೆಗಳಿವೆ.

ಧೋರಣೆಗಳನ್ನು ರೂಪಿಸಲು, ಆಡಳಿತಕ್ಕೆ ಸಲಹೆ ಸಹಕಾರಗಳನ್ನೀಯಲು ಪ್ರತಿಯೊಂದು ವಿಷಯಕ್ಕೂ ಒಂದು ಸಮಿತಿಯನ್ನು (subject committees) ರಚಿಸಲಾಗುವುದು. ಪ್ರತಿಯೊಬ್ಬ ವಿಧಾನಸಭಾ ಸದಸ್ಯನಿಗೂ ಒಂದಲ್ಲ ಒಂದು ವಿಷಯದ ಸಮಿತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶವಿರುವುದು. ಇಂತಹ ಒಟ್ಟು ಹತ್ತು ಸಮಿತಿಗಳನ್ನು ರಚಿಸಲು ನಿರ್ಧರಿಸಲಾಗಿದೆ. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೇಂದ್ರದಲ್ಲಾಗಲೀ ರಾಜ್ಯದಲ್ಲಾಗಲೀ ಚುನಾಯಿತ ಜನತಾ ಪ್ರತಿನಿಧಿಗಳೆಲ್ಲರೂ ಸರಕಾರದ ಧೋರಣೆಗಳನ್ನು ರೂಪಿಸುವಲ್ಲಿ, ಆಡಳಿತೆಗೆ ಸಲಹೆ ಸಹಕಾರಗಳನ್ನು ನೀಡುವಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅನುಕೂಲವಾಗುವಂತೆ ವಿಷಯಗಳಿಗನುಗುಣವಾಗಿ ಸಮಿತಿಗಳನ್ನು ರಚಿಸುತ್ತಿರುವುದು ಇದೇ ಮೊದಲು ಎಂದು ಗಮನಿಸಬೇಕು.

ಕೇರಳದಲ್ಲಿ 1979ರ ಕೊನೆಯಲ್ಲಿ ಎಡ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳ ಸಂಯುಕ್ತ ರಂಗದ ಪ್ರತಿನಿಧಿಗಳನ್ನು ಮೊದಲು ರಾಜ್ಯದ ಬಹುಪಾಲು ಪಂಚಾಯತಿಗಳಿಗೂ, ಪುರಸಭೆಗಳಿಗೂ, ನಗರ ಸಭೆಗಳಿಗೂ ಪ್ರಚಂಡ ಬಹುಮತದಿಂದ ಅಲ್ಲಿನ ಜನರು ಆರಿಸಿ ಕಳಿದರು. 1980ರಲ್ಲಿ ಮೊದಲ ತಿಂಗಳಲ್ಲಿಯೇ ನಡೆದ ಲೋಕಸಭಾ ಚುನಾವಣೆಯಲ್ಲಿಯೂ ವಿಧಾನಸಭಾ ಚುನಾವಣೆಯಲ್ಲಿಯೂ ಪುನಃ ಅಲ್ಲಿನ ಜನರು ಈ ಪಕ್ಷಗಳ ಪ್ರತಿನಿಧಿಗಳನ್ನೇ ಪ್ರಚಂಡ ಬಹುಮತಗಳಿಂದ ಆರಿಸಿ ಕಳಿಸಿದ್ದಾರೆ. ಆದುದರಿಂದ ಕೇರಳ ರಾಜ್ಯದ ಹೊಸ ಸರಕಾರದ ಜನಪ್ರಿಯತೆ ಮತ್ತು ಜನಬೆಂಬಲ ಪಂಚಾಯತು, ಪುರಸಭೆ, ನಗರಸಭೆಗಳ ಭದ್ರ ತಳಪಾಯದ ಮೇಲೆ ನಿಂತಿದೆ. ಹೊಸ ಸರಕಾರವೂ ಈ ಸ್ಥಳೀಯ ಆಡಳಿತಗಳಿಗೆ ಹೆಚ್ಚು ಹೆಚ್ಚು ಅಧಿಕಾರ ಸಂಪನ್ಮೂಲಗಳನ್ನು ವಿಕೇಂದ್ರಿಸಲು ದೃಢ ನಿಶ್ಚಯ ತಾಳಿದೆ. ಕೇರಳದಲ್ಲಿ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಂತೆಯೇ ಸರ್ವಾಧಿಕಾರಿ ಹಾಗೂ ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಎಡ ಹಾಗೂ ಪ್ರಜಾಪ್ರಭುತ್ವವಾದಿ ಸರಕಾರವು ಅಧಿಕಾರಕ್ಕೆ ಬಂದಿದ್ದು, ದೇಶಕ್ಕೇ ಒಂದು ಮಾದರಿಯಾಗಲಿದ್ದು ಬದಲೀ ಮಾರ್ಗವನ್ನು ನಿರ್ದೇಶಿಸುವಂತಾಗಿದೆ.

○

ಹೆಸರಘಟ್ಟದಲ್ಲಿ ಬಹಿರಂಗ ಸಭೆ

ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಐ. ಐ. ಹೆಚ್. ಆರ್. (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರೀಸರ್ಚ್) ಮತ್ತು ರಾಜ್ಯ ಸರ್ಕಾರದ ಒಡೆತನದಲ್ಲಿರುವ ರೆಡ್ ಡೇನ್ ಪ್ರಾಜೆಕ್ಟ್‌ನ ಸುಮಾರು ಐನೂರು ಕಾರ್ಮಿಕರು ದಿನಾಂಕ 7-2-1980 ರಂದು ಸಂಜೆ ಹೆಸರಘಟ್ಟದಲ್ಲಿ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ನಡೆಸಿದರು.

ಐ. ಐ. ಹೆಚ್. ಆರ್. ನ ಒಂದು ಉಪಕೇಂದ್ರ ಕೊಡಗು ಜಿಲ್ಲೆಯ ಚೆಟ್ಟಳ್ಳಿಯಲ್ಲಿದೆ. ಇಲ್ಲಿನ ಕಾರ್ಮಿಕರೂ ಸಹ ಹೆಸರಘಟ್ಟ ಕಾರ್ಮಿಕರೊಂದಿಗೆ ಏಕ ರೀತಿಯ ಬೇಡಿಕೆಗಳನ್ನಿಟ್ಟು ಸಂಯುಕ್ತ ಹೋರಾಟ ನಡೆಸಲಿದ್ದಾರೆ.

ಸುಮಾರು 10-15 ವರ್ಷಗಳಿಂದ ಇಲ್ಲಿನ ಫಾರಂಗಳಲ್ಲಿ ಕೆಲಸ ಮಾಡುತ್ತಿರುವ ಕಾಮಿಕರೂ ದಿನಗೂಲಿಯ ಆಧಾರದ ಮೇಲೆ ಕಡಿಮೆ ಕೂಲಿಗೆ ದುಡಿಯುತ್ತಿದ್ದಾರೆ. ಬೋನಸ್, ಗ್ರಾಚ್ಯುಟಿ, ಇ.ಎಸ್.ಐ, ಪ್ರಾವಿಡೆಂಟ್ ಫಂಡ್ ಮುಂತಾದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಈ ತುರ್ತು ಬೇಡಿಕೆಗಳನ್ನಿಟ್ಟು ಎರಡೂ ಕಡೆಯ ಕಾರ್ಮಿಕರು ಏಕ ಕಾಲದಲ್ಲಿ ಹೋರಾಟ ಪ್ರಾರಂಭಿಸಲಿದ್ದಾರೆ.

ಸಭೆಯ ಅಧ್ಯಕ್ಷತೆಯನ್ನು ಐ. ಐ. ಹೆಚ್. ಆರ್. ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ. ಜಿ. ರಾಮು ಅವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್, ಬೆಂಗಳೂರು ಜಿಲ್ಲಾ ಸಿ. ಪಿ. ಐ. (ಎಂ) ಕಾರ್ಯದರ್ಶಿಗಳಾದ ಕಾಂ. ವಿ. ಜೆ. ಕೆ. ನಾಯರ್, ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥ್ ಮತ್ತು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಸಹಕಾರ್ಯದರ್ಶಿಗಳಾದ ಕಾಂ. ಎಸ್. ಬಿ. ಉದಯಕುಮಾರ್ ಮತ್ತಿತರರು ಮಾತನಾಡಿದರು.

ಎಷ್ಟೇ ಸಮಸ್ಯೆಗಳಿದ್ದರೂ ಬೇಡಿಕೆಗಳು ಈಡೇರುವ ವರೆಗೆ ಹೋರಾಟವನ್ನು ಕೈಬಿಡಬಾರದೆಂಬ ದೃಢ ನಿರ್ಧಾರದೊಂದಿಗೆ ಸಭೆ ಮುಕ್ತಾಯವಾಯಿತು. ○

ದಾಂಡೇಲಿ: ಮುಷ್ಕರಕ್ಕೆ ಎಂ.ಪಿ.ಸಿ. ನೌಕರರ ಬೆಂಬಲ

ಉ.ಕ. ಜಿಲ್ಲೆ, ದಾಂಡೇಲಿ ಪೇಪರ್ ಮಿಲ್ಲಿನ ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘಗಳ ನಡುವೆ ನಡೆದ ಕೊನೆಯ ಸುತ್ತಿನ ಮಾತುಕತೆಗಳು ವಿಫಲವಾದ ಕಾರಣ ಸಿ.ಐ.ಟಿ.ಯು. ನೇತೃತ್ವದಲ್ಲಿ ತಾ॥ 4-2-80 ರಿಂದ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಹೋರಾಟ ನಡೆಸುತ್ತಿರುವ ಕಾರ್ಮಿಕರಿಗೆ ಬೆಂಬಲವಾಗಿ ತಾ॥ 5-2-80 ರಂದು ಮೈಸೂರು ಪವರ್ ಕಾರ್ಪೊರೇಶನ್‌ನ ನೌಕರರು ಭಾರೀ ಮೆರವಣಿಗೆಯಲ್ಲಿ ಬಂದು ಸಹಾನುಭೂತಿ, ಸಹಾಯ ವ್ಯಕ್ತಪಡಿಸಿದರು.

ಬರ್ಚಿಕ್ರಾಪಿನಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ.ಜಿ.ವಿ. ಪವಾರ, ಮನೋಹರ, ಜನ್ನು, ಪ್ರಕಾಶರಾವ್ ಇವರುಗಳು ಮಾತನಾಡಿ ಕಾರ್ಮಿಕ ಸಂಘಟನೆಯ ಅವಶ್ಯಕತೆ, ಐಕ್ಯತೆಗಳ ಬಗ್ಗೆ ಮಾತನಾಡಿದರು. ಪವರ್ ಕಾರ್ಪೊರೇಶನ್‌ನ ನೌಕರರ ಸಂಘದ ಅಧ್ಯಕ್ಷ ಕಾಂ. ವರ್ಗೀಸ್ ಮತ್ತು ಕಾರ್ಯದರ್ಶಿಗಳಾದ ಕರಸಪ್ಪಯವರು ಮಾತನಾಡಿ ಕಾರ್ಮಿಕರ ಹೋರಾಟಗಳಲ್ಲಿ ಐಕ್ಯತೆ ಇರದಿದ್ದರೆ ದುಡಿಯುವ ವರ್ಗ ಏನನ್ನೂ ಪಡೆಯಲು ಸಾಧ್ಯವಿಲ್ಲ, ಕಾಗದ ಕಾರ್ಖಾನೆಯ ನೌಕರರ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆಯೆಂದು ಘೋಷಿಸಿದರು.

ಕಾಂ. ಎಮ್. ಆರ್. ನಾಯ್ಕ ಕೊನೆಯಲ್ಲಿ ವಂದನಾರ್ಪಣೆ ಮಾಡುತ್ತಾ, ಬಂಡವಾಳಶಾಹಿ ಪದ್ಧತಿಯನ್ನು ಅಳಿಸಲು ಕಾರ್ಮಿಕವರ್ಗ ಎಲ್ಲಾ ತ್ಯಾಗಕ್ಕೂ ಸಿದ್ಧರಾಗಬೇಕೆಂದು ಕರೆಯಿತ್ತರು. ○

ಕಿಸಾನ್ ಸಭಾ ರಾಜ್ಯ ಸಮಿತಿ ಸಭೆ ಸೇರಲು ನಿರ್ಣಯ

ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯನ್ನು ಮಾರ್ಚ್ ತಿಂಗಳ ಮೂರರಂದು ಬೆಂಗಳೂರಿನಲ್ಲಿ ಸೇರಿಸಲು 12-2-80 ರಂದು ಸಂಜೆ ಬೆಂಗಳೂರಲ್ಲಿ ಸೇರಿದ್ದ ರಾಜ್ಯಸಮಿತಿಯ ಪದಾಧಿಕಾರಿಗಳ ಸಭೆಯಲ್ಲಿ ನಿರ್ಣಯಿಸಲಾಯಿತು. ಮಾರ್ಚ್ ತಿಂಗಳಲ್ಲಿ ಸದಸ್ಯತ್ವ ಸೇರಿಸುವ ಬಗ್ಗೆ ಹದಿನೈದು ದಿನಗಳ ಪ್ರಚಾರ, ಪ್ರಕ್ಷೋಭೆ, ಏಪ್ರಿಲ್ ತಿಂಗಳಲ್ಲಿ ರೈತಸಂಘದ ರಾಜ್ಯ ಮಂಡಲಿಯ ಸಭೆ ಮತ್ತು ಕಾರ್ಯಕರ್ತರ ತರಬೇತಿ ಶಿಬಿರ, ಮೇ ಅಥವಾ ಜೂನ್ ತಿಂಗಳುಗಳಲ್ಲಿ ರಾಜ್ಯದಾದ್ಯಂತ ಹೋರಾಟದ ಕಾರ್ಯಕ್ರಮ, ರಾಜ್ಯಸಮಿತಿ ಕೇಂದ್ರದ ಕೆಲಸವನ್ನು ಉತ್ತಮಪಡಿಸುವುದು–ಇವೇ ಮೊದಲಾದ ವಿಚಾರಗಳ ಬಗ್ಗೆ ಮಾರ್ಚ್ ಮೂರರಂದು ಸೇರುವ ಸಭೆಯಲ್ಲಿ ಚರ್ಚಿಸಿ, ಯೋಜನೆಗಳನ್ನು ಹಾಕಲಾಗುವುದು. ರೈತ ಸಂಘದ ಎಲ್ಲಾ ಘಟಕಗಳೂ ಸದಸ್ಯತ್ವ ಸೇರಿಸುವ ಕೆಲಸಕ್ಕೆ ಅತೀ ಹೆಚ್ಚಿನ ಪ್ರಾಧಾನ್ಯತೆ ಕೊಡಲು ಪದಾಧಿಕಾರಿಗಳ ಸಭೆಯು ಕರೆ ಇತ್ತಿದೆ.

○

ಮೈಸೂರು : ಎಸ್.ಎಫ್.ಐ. ಸರ್ವಸದಸ್ಯರ ಸಭೆ

ತಾ. 27-1-80 ರಂದು ಮೈಸೂರಿನ ಮಹಾರಾಜ ಕಾಲೇಜಿನ ಜ್ಯೂನಿಯರ್ ಬಿ. ಎ. ಸಭಾಂಗಣದಲ್ಲಿ ಎಸ್. ಎಫ್. ಐ. ಸರ್ವಸದಸ್ಯರ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಶ್ರೀ ವೀರಭದ್ರಪ್ಪನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ ರಾಜ್ಯಸಮಿತಿ ಅಧ್ಯಕ್ಷ ಮು. ಇಕ್‌ಬಾಲ್ ಹುಸೇನ್ ಭಾಗವಹಿಸಿದ್ದರು.

ಮೊದಲಿಗೆ ಪ್ರಧಾನ ಕಾರ್ಯದರ್ಶಿ ನರಸಿಂಹೇಗೌಡರು ಕಳೆದ ಸಾಲಿನ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ವರದಿಯ ಮೇಲಿನ ಚರ್ಚೆಯ ನಂತರ ಬಂದ ಟೀಕೆಗಳಿಗೆ ಪ್ರಧಾನ ಕಾರ್ಯದರ್ಶಿಗಳು ಉತ್ತರ ನೀಡಿದರು. ಮುಖ್ಯ ಅತಿಥಿಗಳಾಗಿದ್ದ ಮು. ಇಕ್‌ಬಾಲ್ ಹುಸೇನ್ ಮಾತನಾಡುತ್ತಾ ಸಂಘಟನೆಯ ಮಹತ್ವ, ಸಂಘಟನೆಯನ್ನು ವಿಸ್ತರಿಸಲು ಪದಾಧಿಕಾರಿಗಳು ಹಾಗೂ ಸದಸ್ಯರ ಜವಾಬ್ದಾರಿಯನ್ನು ವಿವರಿಸಿದರು.

ಖಜಾಂಚಿ ಕುಮಾರಿ ಕೆ. ಎಲ್. ಸುರಭಿಯವರು ಕಳೆದ ಸಾಲಿನ ಆಯವ್ಯಯ ಹಾಗೂ 1980 ನೇ ಸಾಲಿನ ಅಂದಾಜು ಆಯವ್ಯಯವನ್ನು ಮಂಡಿಸಿದರು. ಸಭೆ ಸರ್ವಾನುಮತದಿಂದ ಆಯವ್ಯಯವನ್ನು ಅಂಗೀಕರಿಸಿತು.

ಲೋಕಸಭೆಗೆ ಎಸ್.ಎಫ್.ಐ. ನ ಅಖಿಲಭಾರತ ಸಹ ಕಾರ್ಯದರ್ಶಿಗಳಾದ ಕಾಂ. ಎ. ಕೆ. ಬಾಲನ್ ಮತ್ತು ಸೈಫುದ್ದೀನ್ ಚೌಧರಿಯವರನ್ನು ಆಯ್ಕೆ ಮಾಡಿದ್ದಕ್ಕಾಗಿ ಅಲ್ಲಿನ ಜನತೆಯನ್ನು ಅಭಿನಂದಿಸುವ ನಿರ್ಣಯವನ್ನು ಸಭೆ ಸ್ವಾಗತಿಸಿತು.

ಕಾರಣಾಂತರಗಳಿಂದ ಮುಂದೂಡಲ್ಪಟ್ಟ ಪದಾಧಿಕಾರಿಗಳ ಆಯ್ಕೆಯನ್ನು ತಾ. 3-2-80 ರಂದು ಸೇರಿದ ಜೆ. ಎಸ್. ಎಸ್. ಕಾಲೇಜಿನಲ್ಲಿ ಸೇರಿದ ಸರ್ವಸದಸ್ಯರ ಸಭೆಯಲ್ಲಿ ಪೂರ್ಣಗೊಳಿಸಲಾಯಿತು. ನೂತನ ಸಾಲಿಗೆ ಕೆಳಕಂಡವರು ಆಯ್ಕೆಯಾಗಿದ್ದಾರೆ.

[7ನೇ ಪುಟ ನೋಡಿ]

"ಸರ್ವಾಧಿಕಾರಿ ವಿರೋಧಿ ಹೋರಾಟವನ್ನು ಬಲಪಡಿಸಿ"

ಕೇಂದ್ರ ಸಮಿತಿ ಕರೆ

1980 ಜನವರಿ 27 ರಿಂದ 30 ರವರೆಗೆ ನವದೆಹಲಿಯಲ್ಲಿ ಸಭೆ ಸೇರಿದ್ದ ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಚುನಾವಣೆಗಳು ಮತ್ತು ನಂತರದ ಪರಿಸ್ಥಿತಿಯ ಬಗ್ಗೆ ನೀಡಿದ ಹೇಳಿಕೆಯ ಸಂಕ್ಷಿಪ್ತ ಪಾಠ ಇಲ್ಲಿ ನೀಡಲಾಗಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿಯು ಲೋಕಸಭಾ ಚುನಾವಣೆಗಳಲ್ಲಿ ಸರ್ವಾಧಿಕಾರಿ ಹಾಗೂ ಜಾತೀಯವಾದಿ ಶಕ್ತಿಗಳನ್ನು ಸೋಲಿಸಿದ್ದಕ್ಕಾಗಿ ಪ. ಬಂಗಾಳ, ತ್ರಿಪುರಾ ಮತ್ತು ಕೇರಳದ ಜನತೆಗೆ ತನ್ನ ಅಭಿನಂದನೆಗಳನ್ನು ಕಳಿಸಿದೆ. ಹಾಗೆಯೇ ಈ ರಾಜ್ಯಗಳ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಕಾರ್ಯಕರ್ತರಿಗೆ ಮತ್ತು ನಮ್ಮ ಪಕ್ಷದ ಕಾರ್ಯಕರ್ತರಿಗೆ ಸಹಾ ಪಕ್ಷವು ಅಭಿನಂದಿಸಿದೆ. ಕೇರಳದ ಜನತೆ, ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಮತ್ತು ನಮ್ಮ ಪಕ್ಷದ ಕಾರ್ಯಕರ್ತರು ರಾಜ್ಯದಲ್ಲಿ ಹೊಸ ರಾಜಕೀಯ ಧೃವೀಕರಣವನ್ನು ಸಾಧಿಸಿ ವಿಧಾನಸಭಾ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಸರಕಾರ ಅಧಿಕಾರಕ್ಕೆ ಬರುವಂತೆ ಮಾಡಿದ್ದಾರೆ.

ದೇಶದ ಇತರ ಭಾಗಗಳಲ್ಲಿ ಸಿ. ಪಿ. ಐ. (ಎಂ)ಗೆ, ಇತರೆ ಎಡಪಕ್ಷಗಳಿಗೆ ಹಾಗೂ ಸರ್ವಾಧಿಕಾರಿ-ಜಾತೀಯವಾದಿ ವಿರೋಧಿ ಶಕ್ತಿಗಳಿಗೆ ಮತನೀಡಿದ ಮತದಾರರನ್ನು ಕೇಂದ್ರ ಸಮಿತಿ ಅಭಿನಂದಿಸಿದೆ. ಸಂಸತ್ತಿನಲ್ಲಿ ಪಡೆದ ಸ್ಥಾನಗಳ ದೃಷ್ಟಿಯಿಂದ ಕಡಿಮೆ ಎನಿಸಿದರೂ, ಸರ್ವಾಧಿಕಾರಿ ಶಕ್ತಿಗಳ ಮುನ್ನಡೆಯನ್ನು ತಡೆಯುವ ದೃಷ್ಟಿಯಿಂದ ಕಾಂಗ್ರೆ ವಿರುದ್ಧ ಚಲಾವಣೆಯಾದ ಓಟುಗಳ ಸಂಖ್ಯೆ ಗಮನಾರ್ಹವಾಗಿದೆ.

ಪ. ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿನ ಚುನಾವಣಾ ವಿಜಯ ಹಾಗೂ ಈ ಮೂರು ರಾಜ್ಯಗಳಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಸರಕಾರಗಳು ಅಸ್ತಿತ್ವದಲ್ಲಿರುವುದು ದೇಶದ ಉಳಿದ ಭಾಗಗಳಲ್ಲಿ ಕಾಂಗ್ರೆ ಗಳಿಸಿದ ವಿಜಯದ ಮುಂದೆ ಒಂದು ವಿಷಯವನ್ನು ಸ್ಪಷ್ಟಗೊಳಿಸಿದೆ, ಏನೆಂದರೆ ಎಡ ಪಕ್ಷಗಳು ಒಗ್ಗಟ್ಟಿನಿಂದ ಎಲ್ಲಾ ಸರ್ವಾಧಿಕಾರಿ ವಿರೋಧಿ ಶಕ್ತಿಗಳನ್ನು ಒಂದುಗೂಡಿಸಿ ಹೋರಾಟ ಮಾಡಿದರೆ ಫ್ಯಾಸಿಸ್ಟ್ ಶಕ್ತಿಗಳಿಗೆ ತಕ್ಕ ಉತ್ತರ ನೀಡಲು ಸಾಧ್ಯ.

ಸಿ. ಪಿ. ಐ. ಮುಖಂಡರು ಅನುಸರಿಸಿದ ಸರಿಯಾದ ಧೋರಣೆಯಿಂದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಧೃವೀಕರಣ ಸಾಧ್ಯವಾಗುವಂತೆ ಮಾಡಿದ್ದಕ್ಕೆ ಕೇಂದ್ರ ಸಮಿತಿ ತನ್ನ ಮೆಚ್ಚುಗೆ ವ್ಯಕ್ತಪಡಿಸಿದೆ ಅಲ್ಲದೆ, ಕಾಂಗ್ರೆಸ್, ಕೇರಳ ಕಾಂಗ್ರೆಸ್, ಆರ್. ಎಸ್. ಪಿ. ಮತ್ತು ಅಖಿಲ ಭಾರತ ಮುಸ್ಲಿಂಲೀಗಿನ ಮುಖಂಡರು ಕೇರಳದಲ್ಲಿ ಕಾಂಗ್ರೆಯನ್ನು ಸೋಲಿಸುವಲ್ಲಿ ತಳೆದ ಸಹಾಯಕಾರಿ ನಿಲುವಿಗೆ ಸಹಾ ಕೇಂದ್ರ ಸಮಿತಿ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ.

ತಪ್ಪು ಅಂದಾಜು :

ಲೋಕಸಭಾ ಚುನಾವಣೆಗಳಲ್ಲಿ ಹಾಗೂ ಕೇರಳ ವಿಧಾನಸಭಾ ಚುನಾವಣೆಗಳಲ್ಲಿ ಪಡೆದ ಸ್ವಾಗತಾರ್ಹ ಗೆಲುವುಗಳ ಬಗ್ಗೆ ತೃಪ್ತಿ ಎನಿಸಿದರೂ, ದೇಶದಲ್ಲಿ ಜನತಾಪಕ್ಷ, ಲೋಕದಳ, ಕಾಂಗ್ರೆಸ್ ಪಕ್ಷಗಳು ನಿರೀಕ್ಷೆಗೆ ಮೀರಿ ಸೋಲನ್ನು ಅನುಭವಿಸಿರುವುದರ ಬಗ್ಗೆ ಕೇಂದ್ರ ಸಮಿತಿ ತನ್ನ ಆತಂಕ ವ್ಯಕ್ತಪಡಿಸಿದೆ.

ಇದರಿಂದ, ಸಿ. ಪಿ. ಐ. (ಎಂ) ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಜನತಾಪಕ್ಷದ ಸರಕಾರ, ನಂತರ ಅಧಿಕಾರಕ್ಕೆ ಬಂದ ಲೋಕದಳ-ಕಾಂಗ್ರೆಸ್‌ಗಳ ಉಸ್ತುವಾರಿ ಸರಕಾರಗಳು ತಮ್ಮ ಜನವಿರೋಧಿ ನೀತಿಗಳಿಂದಾಗಿ ಎಷ್ಟರ ಮಟ್ಟಿಗೆ ಜನತೆಯಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆ ಎಂಬುದನ್ನು ಸರಿಯಾಗಿ ಅಂದಾಜು ಮಾಡಲಿಲ್ಲ. ಹಾಗೆಯೇ ತನ್ನ ವಿರೋಧಿಗಳ ವಿಫಲತೆಗಳನ್ನು ತನ್ನ ಅನುಕೂಲಕ್ಕೆ ಉಪಯೋಗಿಸಿಕೊಳ್ಳುವ ಕಾಂಗ್ರೆನ ಸಾಮರ್ಥ್ಯವನ್ನು ಸರಿಯಾಗಿ ಅಳತೆ ಮಾಡಲಿಲ್ಲ. ಇದರಿಂದ ತಕ್ಕ ಪಾಠ ಕಲಿಯುವುದಾಗಿ ಕೇಂದ್ರ ಸಮಿತಿ ಪಕ್ಷದ ಎಲ್ಲಾ ಸದಸ್ಯರಿಗೆ ಹಾಗೂ ಜನಗಳಿಗೆ ಭರವಸೆ ನೀಡಿದೆ.

ಜನತಾಪಕ್ಷ, ಲೋಕದಳ ಮತ್ತು ಕಾಂಗ್ರೆಸ್ ಪಕ್ಷಗಳ ಮುಖಂಡರು, ಕಾರ್ಯಕರ್ತರು ಮತ್ತು ಹಿಂಬಾಲಕರು ಸಹಾ ಚುನಾವಣಾ ಫಲಿತಾಂಶಗಳಿಂದ ಪಾಠ ಕಲಿಯುವರೆಂದು ಕೇಂದ್ರ ಸಮಿತಿ ಆಶಿಸಿದೆ. ಈ ಪಕ್ಷಗಳ ಮುಖಂಡರು ತಮ್ಮ ಸರಕಾರಗಳು ಅನುಸರಿಸಿದ ನೀತಿಗಳು, ಮಾಡಿದ ಕೆಲಸದ ಪ್ರಗತಿ ಹಾಗೂ ಸಂಘಟನೆಯ ನಾಯಕತ್ವದ ಬಗ್ಗೆ ತೀವ್ರವಾಗಿ ವಿಚಾರ ಮಾಡಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಎಚ್ಚರಿಕೆಗಳು :

ಜನತಾಪಕ್ಷ ಮತ್ತದರ ಸರಕಾರ ಜನವಿರೋಧಿ ನೀತಿಗಳನ್ನು ಅನುಸರಿಸುವುದರ ಮೂಲಕ ಸರ್ವಾಧಿಕಾರಿ ವಿರೋಧಿ ಹೋರಾಟಕ್ಕೆ ಮಾಡಿದ ನಪ್ಪ ಹಾಗೂ ಈ ಬಗ್ಗೆ ನಮ್ಮ ಪಕ್ಷ ಜನತಾಪಕ್ಷದ ಧುರೀಣರಿಗೆ ಹಾಗೂ ಸರಕಾರಕ್ಕೆ ನೀಡಿದ ಎಚ್ಚರಿಕೆಗಳನ್ನು ಜ್ಞಾಪಿಸಿದೆ. ಆರೆಸ್ಸೆಸ್-ಜನಸಂಘಗಳ ಕೈವಾಡವಿದ್ದದ್ದು ಸ್ಪಷ್ಟವಾಗಿ ಗೊತ್ತಾದ ಜೆಮ್‌ಷಡ್‌ಪುರ, ಅಲೀಘಡ ಮುಂತಾದ ಕಡೆಗಳಲ್ಲಿ ನಡೆದ ಮತೀಯ ಗಲಭೆಗಳು, ಮೇಲುಜಾತಿಯ ಭೂಮಾಲೀಕರಿಂದ ಹರಿಜನರ ಮೇಲೆ ನಡೆದ ಧಾಳಿಗಳು ಜನತಾ ಪಕ್ಷವನ್ನು ಅಲ್ಪಸಂಖ್ಯಾತರು ಮತ್ತು ಹರಿಜನರಿಂದ ಪ್ರತ್ಯೇಕಿಸಿತು. ಇದರ ಜೊತೆ ಮುಖಂಡರ ಅಧಿಕಾರ ದಾಹದ ಕಿತ್ತಾಟ ಜನತೆಗೆ ಬೇಸರ ತಂದಿತು. ಈ ಬಗ್ಗೆ ನಮ್ಮ ಪಕ್ಷ ನೀಡಿದ ಎಚ್ಚರಿಕೆಗಳು ಯಾವ ಪ್ರಯೋಜನವೂ ಇಲ್ಲದೆಹೋದವು. ಇದರ ಫಲವಾಗಿ 1977ರಲ್ಲಿ ಜನತಾಪಕ್ಷಕ್ಕೆ ದೊಡ್ಡ ರೀತಿಯಲ್ಲಿ ಜಯವನ್ನು ದೊರಕಿಸಿಕೊಟ್ಟ ಅಲ್ಪಸಂಖ್ಯಾತರು ಮತ್ತು ಹರಿಜನರು ಈ ಬಾರಿ ಕಾಂಗ್ರೆಸ್ (ಐ)ಗೆ ಮತ ನೀಡಿದರು. ಗಣನೀಯ ಸಂಖ್ಯೆಯ ಪ್ರಜಾಪ್ರಭುತ್ವವಾದಿಗಳು ಸಹಾ ಭ್ರಮೆ ನಿರಸನದಿಂದ ಕಾಂಗ್ರೆ ಅಧಿಕಾರಕ್ಕೆ ಬಂದರೆ ಕೂಡಲೇ ಜನತೆಯ ಅಗತ್ಯ ಸಮಸ್ಯೆಗಳು ಬಗೆಹರಿಯುತ್ತವೆ, ಸುಭದ್ರ ಸರಕಾರ ರಚನೆಯಾಗುತ್ತದೆಂದು ಭ್ರಮಿಸಿ ಕಾಂಗ್ರೆಗೆ ಮತ ನೀಡಿದರು.

ಇದಕ್ಕೆ ತದ್ವಿರುದ್ಧವಾಗಿ ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯ ಸರಕಾರಗಳು ಜನಹಿತ ಕಾರ್ಯಗಳಲ್ಲಿ ತೊಡಗಿವೆ. ಆದರೆ ಜನತಾ ಮತ್ತು ಲೋಕದಳ ನೇತೃತ್ವದ ರಾಜ್ಯಗಳಲ್ಲಿ ಜನವಿರೋಧಿ ಕಾಯಿದೆಗಳು, ಒಳಜಗಳಗಳು ಜನರಿಗೆ ಬೇಸರ ತಂದಿದೆ. ಆದ್ದರಿಂದಲೇ ಲೋಕಸಭಾ ಚುನಾವಣೆಗಳಲ್ಲಿ ಎಡರಂಗ ಸರಕಾರಗಳಿರುವ ರಾಜ್ಯಗಳಲ್ಲಿ ಎಡರಂಗದ ಅಭ್ಯರ್ಥಿಗಳು ಗೆದ್ದರು, ಉಳಿದ ರಾಜ್ಯಗಳಲ್ಲಿ ಕಾಂಗ್ರೆ ಜಯಗಳಿಸಿತು.

ಕೇಂದ್ರಸಮಿತಿ ಅಭಿಪ್ರಾಯದಲ್ಲಿ ಈಗಲೂ ಕಾಲಮಿಂಚಿಲ್ಲ. ನಡೆದಿರುವ ಘಟನೆಗಳಿಂದ ಪಾಠ ಕಲಿತು, ಹಳೆಯ ತಪ್ಪುಗಳು ಮತ್ತೆ ಆಗದಂತೆ ಜನತಾ ಪಕ್ಷ, ಲೋಕದಳ, ಕಾಂಗ್ರೆಸ್ ಮತ್ತಿತರ ವಿರೋಧಿ ಪಕ್ಷಗಳು ತಮ್ಮ ನೀತಿಗಳನ್ನು ತಿದ್ದಿಕೊಳ್ಳಲು ಅವಕಾಶವಿದೆ. ಕಾಂಗ್ರೆ ಕೇವಲ 42.5 ರಷ್ಟು ಮತಗಳನ್ನು ಪಡೆದಿದ್ದರೂ ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ಚುನಾವಣಾ ಪದ್ಧತಿ ಆಧಾರಿತ ಮತಗಳಿಕೆಯ ಪ್ರಾತಿನಿಧ್ಯ ಇಲ್ಲದಿರುವುದು ಆ ಪಕ್ಷ ಮೂರನೇ ಎರಡರಷ್ಟು ಸ್ಥಾನಗಳನ್ನು ಪಡೆಯುವುದಕ್ಕೆ ಸಹಾಯವಾಗಿದೆ. ಕೆಲವು ರಾಜ್ಯಗಳಲ್ಲಿ ಎಲ್ಲಾ ವಿರೋಧ ಪಕ್ಷಗಳ ಮತಗಳು ಇರಲಿ, ಜನತಾಪಕ್ಷ ಲೋಕದಳ ಮತ್ತುಕಾಂಗ್ರೆಸ್ ಗಳಿಸಿದ ಓಟುಗಳು ಕಾಂಗ್ರೆ ಅಭ್ಯರ್ಥಿಗಳು ಪಡೆದ ಓಟುಗಳಿಗಿಂತ ಅಧಿಕವಾಗಿವೆ. ಆದರೆ ಪಡೆದ ಓಟುಗಳಿಗೂ ಜಯಗಳಿಸಿದ ಅಭ್ಯರ್ಥಿಗಳಿಗೂ ಹೋಲಿಸಿದರೆ ವಿರೋಧ ಪಕ್ಷಗಳಿಗಿಂತ ಕಾಂಗ್ರೆ ಅಭ್ಯರ್ಥಿಗಳೇ ಹೆಚ್ಚಾಗಿ ಗೆದ್ದಿದ್ದಾರೆ. ಈಗ ವಿರೋಧ ಪಕ್ಷಗಳ ಮುಂದಿರುವ ಪ್ರಶ್ನೆಯೆಂದರೆ, ಲೋಕಸಭಾ ಚುನಾವಣೆಗಳಲ್ಲಿ ಪಡೆದ ವಿನಾಶಕಾರಿ ಫಲಿತಾಂಶಗಳಿಗೆ ಎಡೆ ನೀಡಿದ ತಮ್ಮ ತಪ್ಪು ನೀತಿಗಳನ್ನು ತಿದ್ದಿಕೊಳ್ಳುತ್ತಾರೆಯೇ ? ಜನವಿರೋಧಿ ನೀತಿಗಳಿಂದಾಗಿ ಜನಗಳಿಂದ ದೂರವಾದದ್ದನ್ನು ನೆನಪಿಟ್ಟುಕೊಂಡು ಅಂತಹ ನೀತಿಗಳನ್ನು ಕೈಬಿಡುವರೇ ? ತಮ್ಮ ಆಂತರಿಕ ಕಚ್ಚಾಟಗಳನ್ನು ನಿಲ್ಲಿಸಿ ಸರ್ವಾಧಿಕಾರಿ ವಿರೋಧಿ ಹೋರಾಟಕ್ಕೆ ಒಂದಾಗುತ್ತಾರೆಯೇ ಎಂಬುದು ಮುಖ್ಯ ಪ್ರಶ್ನೆಯಾಗಿದೆ.

ಅಪಾಯಕಾರಿ ಸೂಚನೆ :

ಚುನಾವಣೆಗಳ ಫಲಿತಾಂಶಗಳು ಹಾಗೂ ನಂತರದ ಹದಿನೈದು ದಿನಗಳಲ್ಲಿ ನಡೆದಿರುವ ಬೆಳವಣಿಗೆಗಳು ಅಪಾಯದ ಮುನ್ಸೂಚನೆಯಾಗಿವೆ. ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಹೊಸ ಸರಕಾರ ರಚನೆಯಾಗಿರುವುದು ಸರಕಾರ ಬದಲಾವಣೆಯ ಸಾಮಾನ್ಯ ಸಂಗತಿಯಲ್ಲ, ಇದರೊಂದಿಗೇ ತುರ್ತುಪರಿಸ್ಥಿತಿ ಅತಿರೇಕಗಳಿಗೆ ಮುಖ್ಯ ಕಾರಣಕರ್ತರಾಗಿದ್ದ ಅನೇಕ ವ್ಯಕ್ತಿಗಳು ಮತ್ತೆ ಅಧಿಕಾರದ ಮುಖ್ಯ ಸ್ಥಾನಗಳಿಗೆ ಹಿಂದಿರುಗಿದ್ದಾರೆ. ಕೆಲವರು ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ತುರ್ತುಪರಿಸ್ಥಿತಿಯಲ್ಲಿ ಅತ್ಯಾಚಾರಗಳನ್ನು ಎಸಗಿದ ಅಧಿಕಾರಿಗಳು ಉಳಿದ ಅಧಿಕಾರಿಗಳ ಹಿರಿತನವನ್ನು ಉಲ್ಲಂಘಿಸಿ ಮಹತ್ವದ ಇಲಾಖೆಗಳ ಮುಖ್ಯಾಧಿಕಾರಿಗಳಾಗುತ್ತಿದ್ದಾರೆ. ಕುಪ್ರಸಿದ್ಧ "ಗುಂಪು" ಸಂಸತ್ತಿನಲ್ಲಿ ವಿರೋಧ ಪಕ್ಷಗಳ ಬಗ್ಗೆ ಅಸಹನೆಯನ್ನು ತೋರಿಸುತ್ತಿದೆ. ಸಂಸತ್ತಿನಲ್ಲಿ ಈ "ಗುಂಪು" ಹಾಗೂ ರಾಜ್ಯಗಳಲ್ಲಿ ಅವರ ಭಂಟರು ಕಾಂಗ್ರೆ ತಾಳಕ್ಕೆ ತಕ್ಕಂತೆ ಕುಣಿಯದ ರಾಜ್ಯ ಸರಕಾರಗಳನ್ನು ಉರುಳಿಸಲು ಅಥವಾ ವಿಸರ್ಜಿಸಲು ಒತ್ತಾಯ ಮಾಡುತ್ತಿದ್ದಾರೆ. ಶಾಸಕರನ್ನು ಸಗಟು ಮಾರುಕಟ್ಟೆಯಲ್ಲಿ ಕೊಳ್ಳುವಂತೆ ಇಡೀ ಮಂತ್ರಿಮಂಡಲವನ್ನೇ ಕೊಂಡುಕೊಳ್ಳುವ ವ್ಯಾಪಾರ ನಡೆಯುತ್ತಿದೆ. ಈ "ಗುಂಪು" ತುರ್ತುಪರಿಸ್ಥಿತಿಯ ಸಮಯದಲ್ಲಿ ಮಾಡಿದ ಅಪರಾಧಗಳ ತನಿಖೆ ನಡೆಸುತ್ತಿರುವ ತಪ್ಪಿಗಾಗಿ ಅವರನ್ನು ಬಂಧಿಸುವ, ಶಿಕ್ಷಿಸುವ ಅಥವಾ ತೊಂದರೆಗೊಳಪಡಿಸುವ ಕೆಲಸ ನಡೆಯುತ್ತಿದೆ.

ಇವೆಲ್ಲವೂ, ಸರ್ವಾಧಿಕಾರಿ ವಿರೋಧಿ ಶಕ್ತಿಗಳು ಒಂದಾಗಿ ಹೋರಾಡದಿದ್ದರೆ ಸದ್ಯದ ಸರಕಾರ ಸರ್ವಾಧಿಕಾರವನ್ನು ಬೆಳಸುತ್ತದೆಂಬುದಕ್ಕೆ ಎಚ್ಚರಿಕೆಯಾಗಿದೆ ಎಂದು ಕೇಂದ್ರಸಮಿತಿ ತಿಳಿಸಿದೆ,

ಪ್ರತಿಭಟನೆ :

ಕೇಂದ್ರಸಮಿತಿಯ ಅಭಿಪ್ರಾಯದಲ್ಲಿ ಒಂದು ಸಂಯುಕ್ತ ಪ್ರತಿಭಟನೆ ಬೆಳೆಯುವ ಎಲ್ಲಾ ಸಾಧ್ಯತೆಗಳೂ ಇವೆ. ಸರ್ವಾಧಿಕಾರಿ ಶಕ್ತಿಗಳು ಮತ್ತೆ ಅಧಿಕಾರಕ್ಕೆ ಬಂದೊಡನೆ ವಿವಿಧ ಪಕ್ಷಗಳು ಒಂದಾಗುತ್ತಿವೆ. ಸಂಸತ್ತಿನಲ್ಲಿ ಸರಕಾರದ ಸರ್ವಾಧಿಕಾರಿ ಕ್ರಮಗಳನ್ನು ಒಗ್ಗಟ್ಟಿನಿಂದ ವಿರೋಧಿಸಲು ವಿರೋಧ ಪಕ್ಷಗಳು ಒಂದಾಗಿವೆ. ಕಾಂಗ್ರೆಯೇತರ ರಾಜ್ಯ ಸರಕಾರಗಳನ್ನು ಉರುಳಿಸುವ ಅಥವಾ ವಿಸರ್ಜಿಸುವ ಕೇಂದ್ರ ಸರಕಾರದ ಕ್ರಮದ ವಿರುದ್ಧ ಎಲ್ಲಾ ಕಾಂಗ್ರೆಯೇತರ ಮುಖ್ಯಮಂತ್ರಿಗಳನ್ನು ಒಂದುಗೂಡಿಸಿದೆ. ಲೋಕಸಭಾ ಚುನಾವಣೆಗಳ ನಂತರ ಪ್ರಜಾಸತ್ತೆಯ ಮೇಲಾಗುತ್ತಿರುವ ಧಾಳಿಯನ್ನು ಎದುರಿಸಬೇಕೆಂಬ ಅರಿವು ಎಲ್ಲಾ ಕಡೆಗಳಲ್ಲಿಯೂ ಬೆಳೆಯುತ್ತಿದೆ. ಚುನಾವಣೆಗಳ ವಿಜಯ ಮತ್ತೆ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಹೇರಲು ಜನತೆ ನೀಡಿದ ಪರವಾನಗಿ ಎಂದು ಶ್ರೀಮತಿಗಾಂಧಿಯವರು ಭಾವಿಸಿದರೆ, ಯಾವ ಜನತೆ ಕಾಂಗ್ರೆಗೆ ಓಟು ಹಾಕಿದರೋ ಅದೇ ಜನತೆ ತುರ್ತುಪರಿಸ್ಥಿತಿಯನ್ನು ಪ್ರತಿಭಟಿಸಲು ಮುಂದೆ ಬರುವುದು ಖಂಡಿತ, 1977ರ ಚುನಾವಣೆಗಳಲ್ಲಿ ಶ್ರೀಮತಿಗಾಂಧಿಯವರ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆದಂತೆ, ಮತ್ತೊಮ್ಮೆ ಸರ್ವಾಧಿಕಾರಿ ಶಕ್ತಿಗಳನ್ನು ವಿರೋಧಿಸುವುದು ಸಹಜ,

ಅಲ್ಲದೆ, ದಿನನಿತ್ಯದ ಸಮಸ್ಯೆಗಳು ಪರಿಹಾರವಾಗಿ, ಸುಭದ್ರ ಸರಕಾರ ಸಿಗುತ್ತದೆಂಬ ಭ್ರಮೆಯಿಂದ ಕಾಂಗ್ರೆಗೆ ಓಟು ಹಾಕಿದವರ ಭ್ರಮೆ ಕೆಲವು ದಿನಗಳಲ್ಲಿ ಇಳಿಯುವುದು ಖಂಡಿತ. ಜನಗಳ ಸಮಸ್ಯೆಗಳು ಪರಿಹಾರವಾಗುವ ಬದಲು ಮತ್ತಷ್ಟು ಬೆಳೆಯಲಿವೆ. ಕಾಂಗ್ರೆನ ವರ್ಗ ಧೋರಣೆಯಿಂದಾಗಿ ಬೆಲೆಏರಿಕೆ, ನಿರುದ್ಯೋಗ, ರೈತರ ದಿವಾಳಿತನ ಮುಂತಾದ ಸಮಸ್ಯೆಗಳು ಬೆಳೆಯಲಿವೆ. ಇಂತಹ ಸಂದರ್ಭದಲ್ಲಿ ಜನಗಳ ಪ್ರತಿಭಟನೆಗಳು ಬೆಳೆಯುತ್ತವೆ, ಆಗ ಕಾಂಗ್ರೆಗೆ ಮತ ನೀಡಿದ ಬಹುಪಾಲು ಜನತೆ ಈ ಪ್ರತಿಭಟನೆಯಲ್ಲಿ ಪಾಲುಗೊಳ್ಳುತ್ತಾರೆ.

(6ನೇ ಪುಟ ನೋಡಿ)

ಬಂಡವಾಳಶಾಹಿ-ಭೂಮಾಲಕ ಆಳ್ವಿಕೆಯಲ್ಲಿ ಹರಿಜನರ ಅವಮಾನಾಸ್ಪದ ಬದುಕು

—ಎಂ. ಎಲ್. ರಾವ್

ಹರಿಜನರ ಮೇಲೆ ನಡೆಯುತ್ತಿರುವ, ರಕ್ತ ಹೆಪ್ಪುಗಟ್ಟಿಸುವ, ಕ್ರೂರ ದಬ್ಬಾಳಿಕೆ, ಈ ಅಪರಾಧಗಳಲ್ಲಿ ನೇರವಾಗಿ ಭಾಗವಹಿಸುವ ಭೂಮಾಲಕ ಹಿತಾಸಕ್ತಿಗಳು ಮತ್ತು ಅವರ ಗುಲಾಮರು, ಸ್ಥಳೀಯ ಆಡಳಿತ ವರ್ಗದ ಮತ್ತು ಕಾನೂನು ಪಾಲಕರ ಕಾರಸ್ಥಾನ-ಇವೆಲ್ಲವೂ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಂದಿನಿಂದ ಇಂದಿನವರೆಗೆ ಸಂಸತ್ತಿನಲ್ಲಿ ಮತ್ತು ಶಾಸನ ಸಭೆಗಳಲ್ಲಿ ಚರ್ಚೆಗೆ ಬಂದ ವಿಷಯಗಳಾಗಿವೆ.

ಈ ವಿಚಾರದಲ್ಲಿ ಈ ಸದನಗಳಲ್ಲಿ ಪದೇ ಪದೇ ತೀವ್ರಕಳವಳವು ವ್ಯಕ್ತವಾಗಿದ್ದರೂ, ಅನೇಕ ಗೊತ್ತುವಳಿಗಳು ಮಂಡಿಸಲ್ಪಟ್ಟಿದ್ದರೂ ಹರಿಜನರ ಮೇಲಿನ ಅತ್ಯಾಚಾರಗಳು ಸ್ವಾತಂತ್ರ್ಯಾನಂತರದ ಕಳೆದ 32 ವರ್ಷಗಳಲ್ಲಿ ನಿರಾತಂಕವಾಗಿ ಮುಂದುವರಿದಿದೆ. ಅವರ ಸಾಮಾಜಿಕ, ಆರ್ಥಿಕ, ಮತ್ತು ದೈಹಿಕ ದಮನವು ನೆಹರೂ ಅವರ "ಸಮಾಜವಾದದ ಮಾದರಿ" ಯುಗದಲ್ಲೂ, ಇಂದಿರಾ ಗಾಂಧಿಯ "ಚಲನಶೀಲ ದಶಕ"ದಲ್ಲೂ, ಮತ್ತು "ದ್ವಿತೀಯ ಸ್ವಾತಂತ್ರ್ಯ"ವೆಂದು ಕರೆಸಿಕೊಂಡಿರುವ ಜನತಾಪಕ್ಷದ ಎರಡೂವರೆ ವರ್ಷಗಳ ಆಳ್ವಿಕೆಯಲ್ಲೂ ಮುಂದುವರಿದೇ ಇತ್ತು.

ಗಾಂಧೀಜಿಯ "ದೇವರ ಮಕ್ಕಳಾದ" ಹರಿಜನರು, ಹಿಂದೂ ಸಮಾಜದಲ್ಲಿ ಶತಮಾನಗಳಿಂದ ರೂಢಿಯಲ್ಲಿದ್ದ ಜಾತಿ ಪದ್ಧತಿಯಿಂದ ಹುಟ್ಟಿ ಬಂದವರು. ಪರಂಪರಾಗತವಾದ ಕಟ್ಟುನಿಟ್ಟಿನ ಈ ಪದ್ಧತಿಯಲ್ಲಿ ಅವರು ಅತ್ಯಂತ ಕೆಳಗಿನ ಹಂತದಲ್ಲಿ ಇರಿಸಲ್ಪಟ್ಟಿದ್ದಾರೆ. ಸಮಾಜದಲ್ಲಿ ಅತೀ ಕೊಳಕೆಂದು ಪರಿಗಣಿಸಲ್ಪಡುವ ಅವರ ಪಾಲಿನ ಕೆಲಸಗಳೂ ಕೊಳಕಾಗಿದ್ದು, ಅವರು ಜೀತದಾಳುಗಳೇ ಆಗಿದ್ದಾರೆ. ಭಾರತದ ಜನಸಂಖ್ಯೆಯ ಶೇ. 15 ರಷ್ಟು ಇರುವ (ಸುಮಾರು 10 ಕೋಟಿ ಗಂಡಸರು, ಹೆಂಗಸರು ಮತ್ತು ಮಕ್ಕಳು) ಇವರಿಗೆ ಮನುಷ್ಯನಿಗೆ ಸಲ್ಲತಕ್ಕ ಯಾವ ಬಗೆಯ ಗೌರವವೂ ಸಲ್ಲುತ್ತಿಲ್ಲ ಮತ್ತು ಎಲ್ಲಾ ತರದ ಹಕ್ಕುಗಳಿಂದಲೂ ವಂಚಿತರಾಗಿ, ಆಳವಾಗಿ ಶೋಷಿಸಲ್ಪಡುತ್ತಿದ್ದಾರೆ.

ನಮ್ಮ ಸಂವಿಧಾನವು ಹರಿಜನರ ರಕ್ಷಣೆಗೋಸ್ಕರ ಅನೇಕ ಕ್ರಮಗಳನ್ನು ಒಳಗೊಂಡಿದೆ. 15ನೇ ಪರಿಚ್ಛೇದದಲ್ಲಿ ಇವರಿಗೆ ಉದ್ಯೋಗಗಳನ್ನು ನೀಡುವುದಕ್ಕಾಗಿ ವಿಶಿಷ್ಟ ಆದರೆ ಸಮಾನ ಉದ್ಯೋಗಾವಕಾಶದ ನೀತಿಗೆ ವಿರುದ್ಧವೆನಿಸದ ಕ್ರಮಗಳಿವೆ, 17ನೇ ಪರಿಚ್ಛೇದದನ್ವಯ ಪಾಸು ಮಾಡಲ್ಪಟ್ಟ ಮತ್ತು 1977ರಲ್ಲಿ ತಿದ್ದುಪಡಿಮಾಡಲಾದ 1955ರ ಅಸ್ಪೃಶ್ಯತಾ ಅಪರಾಧಗಳ ಕಾಯಿದೆ ಮತ್ತು ನಾಗರಿಕ ಹಕ್ಕುಗಳ ರಕ್ಷಣಾ ಮಸೂದೆಗಳು ಹರಿಜನರ ವಿರುದ್ಧ ಅಪರಾಧವೆಸಗುವ ದುಷ್ಟರನ್ನು ಶಿಕ್ಷಿಸಲು ರಾಜ್ಯಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟಿವೆ. 46ನೇ ಪರಿಚ್ಛೇದವು ಹರಿಜನರಿಗೆ ವಿಶೇಷ ರಕ್ಷಣೆ ನೀಡುವುದರೊಂದಿಗೆ, ಅನ್ಯಾಯ ಮತ್ತು ಶೋಷಣೆಗಳ ವಿರುದ್ಧ ಅವರಿಗೆ ರಕ್ಷಣೆ ನೀಡುವ ಜವಾಬ್ದಾರಿಯನ್ನು ಸರಕಾರದ ಮೇಲೆ ಹೊರಿಸಿದೆ. 33? ಮತ್ತು 338ನೇ ಪರಿಚ್ಛೇದಗಳು ಹರಿಜನ-ಗಿರಿಜನರ ಕಲ್ಯಾಣಕ್ಕಾಗಿ ಒರಿಸ್ಸಾ, ಮಧ್ಯಪ್ರದೇಶ ಮತ್ತು ಬಿಹಾರಗಳಲ್ಲಿ ವಿಶೇಷ ಮಂತ್ರಿ ಪದವಿಗಳ ಸೃಷ್ಟಿಗೆ ಮತ್ತು ಆಯೋಗಗಳ ರಚನೆಗೆ ಅವಕಾಶ ನೀಡಿವೆ.

ಈ ಎಲ್ಲಾ ಸಾಂವಿಧಾನಿಕ ರಕ್ಷಣೆಗಳಿದ್ದೂ ಅಸ್ಪೃಶ್ಯತೆಯು ಬಹಳವಾಗಿ ಆಚರಣೆಯಲ್ಲಿರುವ ಒಂದು ಸಾಮಾಜಿಕ ಕ್ರಿಯೆಯಾಗಿದೆ ಮತ್ತು ಹರಿಜನರಿಂದ ಜಮೀನನ್ನು ಕಾನೂನು ಬಾಹಿರ ರೀತಿಯಲ್ಲಿ ಕಸಿದುಕೊಳ್ಳುವುದು ದೈನಂದಿನ ವ್ಯವಹಾರಗಳಾಗಿವೆ. ಕೊಲೆ, ಹರಿಜನ ಮಹಿಳೆಯರ ಮಾನಭಂಗ ಮತ್ತು ಹರಿಜನರ ಮನೆಗಳನ್ನು ಸುಟ್ಟು ಹಾಕುವುದು ಇತ್ಯಾದಿಗಳು ಭೂಮಾಲಕರ ನಿತ್ಯದ ವ್ಯವಹಾರಗಳಾಗಿವೆ. ಕೃಷಿ ಕೂಲಿಗಾರರ ಕನಿಷ್ಟ ವೇತನ ಮಸೂದೆಯನ್ನು ದೇಶದ ಯಾವ ಭಾಗದಲ್ಲೂ ಜಾರಿಗೊಳಿಸಲಾಗಲಿಲ್ಲ.

ಅಸ್ಪೃಶ್ಯತಾ ಕಾಯಿದೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ 5 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿತ್ತು. ಆದರೆ ನೌಕರಶಾಹಿಯ ನಿರುತ್ಸಾಹದ ಪರಿಣಾಮವಾಗಿ ಈ ಹಣವು ವಿನಿಯೋಗಿಸಲ್ಪಡದೆ ಉಳಿದಿದೆಯೆಂದು ಹರಿಜನ-ಗಿರಿಜನರ ಕಮಿಶನರ್ ಹೇಳಿದ್ದಾರೆ. 1955 ರಿಂದ 1976ರ ವರೆಗಿನ ಅವಧಿಯಲ್ಲಿ ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ತಮಿಳ್ನಾಡು ಮತ್ತು ಆಂಧ್ರ ಪ್ರದೇಶ-ಈ ಏಳು ರಾಜ್ಯಗಳಲ್ಲಿ ದಾಖಲು ಮಾಡಲ್ಪಟ್ಟ ಅಸ್ಪೃಶ್ಯತಾ ಸಂಬಂಧ ಅಪರಾಧಗಳು 22,470 ಆಗಿದ್ದು, ಇದು ಒಟ್ಟು ಇಂತಹ ಅಪರಾಧಗಳ ಬಹಳ ಸಣ್ಣ ಭಾಗವಾಗಿದೆ,

ಗುಜರಾತಿನ ಸಾಥೋಡ್ ಮತ್ತು ಕುಥವಿ ಗ್ರಾಮಗಳಲ್ಲಿ ಸೆಪ್ಟೆಂಬರ್ 1977 ರಲ್ಲಿ ನಡೆದ ಒಂದು ಸಮೀಕ್ಷೆಯ ಪ್ರಕಾರ ಭಾಂಗಿ ಹುಡುಗರನ್ನು ಶಾಲೆಯ ಪ್ರತ್ಯೇಕವಾಗಿ ಮೂಲೆಗಳಲ್ಲಿ ಕುಳ್ಳಿರಿಸಲಾಗುತ್ತಿತ್ತಲ್ಲದೆ, ಅವರನ್ನು ಎಲ್ಲರಿಗಾಗಿರುವ ನೀರಿನ ಮಡಕೆಯಿಂದ ನೀರು ಕುಡಿಯಲು ಬಿಡುತ್ತಿರಲಿಲ್ಲ. ಸವರ್ಣೀಯ ಹಿಂದುಗಳ ಬಾವಿಗಳಿಂದ ಹರಿಜನರಿಗೆ ನೀರು ನಿರಾಕರಿಸಲ್ಪಡುತ್ತಿತ್ತು. 1976 ರಲ್ಲಿ ಮಧ್ಯಪ್ರದೇಶದ 179 ಹಳ್ಳಿಗಳ ಪೈಕಿ 124ರಲ್ಲಿ ಸಾಮಾನ್ಯ (common) ಬಾವಿಗಳಿಂದ ಹರಿಜನರನ್ನು ನೀರು ಸೇದಲು ಬಿಡುತ್ತಿರಲಿಲ್ಲ. 128 ಗ್ರಾಮಗಳ ಪೈಕಿ 49ರಲ್ಲಿ ಹರಿಜನರಿಗೆ ದೇವಾಲಯಗಳಿಗೆ ಪ್ರವೇಶವಿರಲಿಲ್ಲ. 39 ಗ್ರಾಮಗಳ ಪೈಕಿ 28ರಲ್ಲಿ ಚಹಾದ ಅಂಗಡಿಗಳು ಅವರಿಗೆ ತೆರವಾಗಿರಲಿಲ್ಲ. 38 ಗ್ರಾಮಗಳಲ್ಲಿ ಮಾತ್ರ ಅವರಿಗೆ ಕ್ಷೌರಿಕರ ಸೇವೆ ಲಭ್ಯವಿತ್ತು.

ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ನೌಕರಶಾಹಿಯು ನಿರ್ಲಿಪ್ತತೆಯಿಂದಿರುವುದು ಮಾತ್ರವಲ್ಲ, ಅಸ್ಪೃಶ್ಯತೆಯ ಆಚರಣೆಯಲ್ಲಿ ಅದು ಸಕ್ರಿಯವಾಗಿ ಭಾಗವಹಿಸುತ್ತಿದೆ. ವಿವಿಧ ರೀತಿಯ ಸೇವಾ ಸೌಲಭ್ಯಗಳಲ್ಲಿ ನೌಕರಶಾಹಿಯು ಹರಿಜನರ ವಿರುದ್ಧ ತೋರುವ ಪಕ್ಷಪಾತ ಧೋರಣೆಯ ವಿರುದ್ಧ 1975-77ರ ಅವಧಿಯಲ್ಲಿ 29,000 ದೂರುಗಳು ಬಂದಿರುವುದಾಗಿ ಹರಿಜನ-ಗಿರಿಜನ ಕಮಿಶನರ್ ಹೇಳಿದ್ದಾರೆ.

ಹರಿಜನರ ಈ ಅಮಾನುಷ ಬದುಕು ಕೇವಲ ಹಳ್ಳಿಗಳಿಗೇ ಸೀಮಿತವಲ್ಲ. ಪಟ್ಟಣಗಳಲ್ಲಿ ಇವರು ತಮ್ಮ ಜೀವನೋಪಾಯಕ್ಕೆ ಕಕ್ಕಸಗಳನ್ನು ತೊಳೆಯುವುದು, ಗುಡಿಸುವುದು, ಪ್ರಾಣಿಗಳ ಚರ್ಮ ಸುಲಿದು ಅದನ್ನು ಹದ ಮಾಡುವುದೇ ಮುಂತಾದ ಹೀನವೃತ್ತಿಗಳನ್ನು ಅವಲಂಬಿಸಿರಬೇಕಾಗುತ್ತದೆ. 360 ಪಟ್ಟಣಗಳ ಪೈಕಿ 199ರಲ್ಲಿ ಮಾತ್ರ ಆಂಶಿಕವಾಗಿ ಒಳಚರಂಡಿಗಳು ನಿರ್ಮಿಸಲ್ಪಟ್ಟಿವೆ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲೂ, ಪರಂಪರಾಗತವಾದ ಜಾತಿದ್ವೇಷಗಳು ಇನ್ನೂ ಬಲಿತಿವೆ.

ಆಗಸ್ಟ್ 16, 1977 ರಂದು ಮದರಾಸಿನಲ್ಲಿ ನಡೆದ ಘಟನೆಯಂತಹ ಸಂದರ್ಭಗಳಲ್ಲಿ ಈ ದ್ವೇಷವು ಹೊರಗೆ ಬರುತ್ತದೆ. ಉತ್ತಮ ಹಾಸ್ಟೆಲ್ ಸೌಲಭ್ಯಗಳಿಗಾಗಿ ಶಾಂತಯುತ ಮತಪ್ರದರ್ಶನ ನಡೆಸುತ್ತಿದ್ದ ಹರಿಜನ ವಿದ್ಯಾರ್ಥಿಗಳ ಮೇಲೆ ನೂರಾರು ಬಾಡಿಗೆ ಗೂಂಡಾಗಳು ಪೊಲೀಸ್ ನೆರವು ಪಡೆದು ಸೋಡಾ ಬಾಟ್ಲಿ, ಸೈಕಲ್ ಚೇನ್, ದೊಣ್ಣೆ ಮತ್ತು ಕಲ್ಲುಗಳಿಂದ ಆಕ್ರಮಣ ನಡೆಸಿದರು. ಈ ಆಕ್ರಮಣ ನಡೆಯುತ್ತಿದ್ದಾಗ, ಆ ವಿದ್ಯಾರ್ಥಿಗಳನ್ನು ಪೊಲೀಸರು ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದರು.

ಸೆಪ್ಟೆಂಬರ್ 1977ರಲ್ಲಿ ದೊರೆತ ಅಂಕಿ ಅಂಶಗಳ ಆಧಾರದಿಂದ ಹರಿಜನರ ಮೇಲಿನ ಅತ್ಯಾಚಾರಗಳು ಇಳಿಮುಖವಾಗಿಲ್ಲವೆಂಬುದೂ ಖಚಿತವಾಗುತ್ತದೆ.

ಇಸ್ವಿ	ಅಪರಾಧಗಳ ಸಂಖ್ಯೆ
1974	8860
1975	7781
1976	5867
1977 (ಸೆಪ್ಟೆಂಬರ್-ವರೆಗೆ)	9225

(ಮೂಲ: ಹರಿಜನ-ಗಿರಿಜನ ಕಮಿಶನರರ 24ನೇ ವರದಿ, 1977-78)

ಮರಣಾಂತಿಕ ಗಾಯಗಳನ್ನೊಳಗೊಂಡ ಅಪರಾಧಗಳು 1975ರಲ್ಲಿ 1268 ಮತ್ತು 1976ರಲ್ಲಿ 1974 ಆಗಿದ್ದುವು. ಮನೆಗಳಿಗೆ ಬೆಂಕಿಯಿಡುವುದು ಮತ್ತು ಆಸ್ತಿಪಾಸ್ತಿಗೆ ಹಾನಿ ಕ್ರಮವಾಗಿ 774 ಮತ್ತು 726 ಆಗಿದ್ದುವು. ಶ್ರೀಮತಿ ಗಾಂಧಿಯ ಪ್ರಚಾರ ಯಂತ್ರ ಹೇಳುತ್ತಿದ್ದಂತೆ, 1976ರಲ್ಲಿ ಹರಿಜನರ ವಿರುದ್ಧ ಹಿಂಸಾತ್ಮಕ ಘಟನೆಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರಲಿಲ್ಲ. ಮೇಲಿನ ಅಂಕಿ ಅಂಶಗಳಿಂದ 1976 ರಲ್ಲಿ ವರದಿಮಾಡಲ್ಪಟ್ಟ ಅಪರಾಧಗಳಿಂದ ಇಂತಹ ದುಷ್ಕೃತ್ಯಗಳು ಇಳಿಮುಖವಾಗಿದ್ದುವೆಂದು ತೋರಿದರೂ ಅದು ನಿಜವಲ್ಲ. ಯಾಕೆಂದರೆ ಆಗ ಜಾರಿಯಲ್ಲಿದ್ದ ತುರ್ತುಪರಿಸ್ಥಿತಿಯು ಇಂತಹ ದುಷ್ಕೃತ್ಯಗಳು ವರದಿಯಾಗುವುದಕ್ಕೆ ಮತ್ತು ಅವುಗಳಿಗೆ ಪತ್ರಿಕೆಗಳಲ್ಲಿ ಮತ್ತು ರೇಡಿಯೋದಲ್ಲಿ ಪ್ರಚಾರ ಸಿಗುವುದಕ್ಕಿದ್ದ ದೊಡ್ಡ ತಡೆಯಾಗಿತ್ತು.

ತುರ್ತುಪರಿಸ್ಥಿತಿಯಲ್ಲದಿದ್ದರೂ, ಭೂಮಾಲಕರ, ಪೊಲೀಸ್ ಮತ್ತು ಸ್ಥಳೀಯ ಆಡಳಿತವರ್ಗದ ಹೆದರಿಕೆಯಿಂದ ಅಥವಾ ಜನರ ಅಜ್ಞಾನದಿಂದ ಇಂತಹ ಹೆಚ್ಚಿನ ಅಪರಾಧಗಳು ವರದಿಯಾಗದೇ ಉಳಿಯುತ್ತಿದ್ದುವು. ಆದ್ದರಿಂದ ಈ ಅಂಕಿ ಅಂಶಗಳು ಸೂಚಿಸುವುದಕ್ಕಿಂತಲೂ ಹೆಚ್ಚು ಇಂತಹ ಘಟನೆಗಳು ನಡೆದಿದ್ದು, ಅವುಗಳ ಪೈಕಿ ಅತ್ಯಂತ ಘೋರವಾದವುಗಳಿಗೆ ಮಾತ್ರ ಪ್ರಚಾರ ಸಿಕ್ಕಿದೆ.

ಒಂದು ದಶಕದ ಹಿಂದೆ ಆಗಿನ ಮದರಾಸು ಪ್ರಾಂತ್ಯದ ಕಿಳ್‌ವೇನ್ಮಣಿ ಎಂಬಲ್ಲಿ ಡಿಸೆಂಬರ್ 25, 1969 ರಂದು 66 ಮಂದಿ ಹರಿಜನ ಗಂಡಸರು, ಹೆಂಗಸರು, ಮತ್ತು ಮಕ್ಕಳನ್ನು ಭೂಮಾಲಕರು ಸಜೀವ ಸುಟ್ಟು ಹಾಕಿರುವ ಘಟನೆ ಎಲ್ಲಾ ಜನರ ಗಮನ ಸೆಳೆದಿತ್ತು. ಸತ್ಯವು ತಿಳಿದಿದ್ದರೂ, ಯಾವೊಬ್ಬ ಪಾತಕಿಯೂ ಶಿಕ್ಷೆಗೆ ಗುರಿಯಾಗಲಿಲ್ಲ. ಹೈಕೋರ್ಟು ತನ್ನ ತೀರ್ಪಿನಲ್ಲಿ, "1969 ಡಿಸೆಂಬರ್ 25ರ ರಾತ್ರಿಯಲ್ಲಿ ನಡೆದ ಈ ದುರ್ಘಟನೆಗೆ ಆಪಾದಿತರೇ ಕಾರಣರಾಗಿದ್ದರೂ, ಸರಿಯಾದ ಸಾಕ್ಷ್ಯಾಧಾರಗಳ ಅಭಾವದಿಂದ ಅವರಿಗೆ ಶಿಕ್ಷೆ ವಿಧಿಸುವುದು ಅಸಾಧ್ಯ" ವೆಂದು ಹೇಳಿ ಅವರೆಲ್ಲರನ್ನೂ ಬಿಡುಗಡೆಗೊಳಿಸಿತು.

ಇತ್ತೀಚೆಗೆ ಅಂದರೆ 1977ರ ಮೇ 27ರಂದು ಬಿಹಾರಿನ ಬೆಲ್ಚಿಯಲ್ಲಿ ಹರಿಜನರ ಮೇಲೆ ಇಷ್ಟೇ ಉಗ್ರವಾದ ಇನ್ನೊಂದು ದಬ್ಬಾಳಿಕೆ ನಡೆಯಿತು. ಸರಕಾರವು ಅದು ಎರಡು ಪುಂಡರ ಗುಂಪುಗಳೊಳಗೆ ನಡೆದ ಘರ್ಷಣೆ ಮತ್ತು ಈ ಘರ್ಷಣೆಯಲ್ಲಿ ಒಂದು ಗುಂಪು ನಿರ್ನಾಮವಾಗಿದೆಯೆಂದು ಹೇಳಿತು. ಆದರೆ ಶ್ರೀ ರಾಮ್‌ಧನ್ ಕಾರ್ಯದರ್ಶಿಯಾಗಿದ್ದ (ಜನತಾ ಸಂಸದೀಯ ಪಕ್ಷದ ಕಾರ್ಯದರ್ಶಿಯೂ ಕೂಡ) ಸಂಸತ್ತಿನ ಹರಿಜನ-ಗಿರಿಜನ ಸಮಿತಿಯಿಂದ ನೇಮಿಸಲ್ಪಟ್ಟ ಸತ್ಯಶೋಧಕ ಸಮಿತಿಯು ಈ ಘಟನೆಯು ಹರಿಜನರ ಮತ್ತು ಬೆಳೆಪಾಲುದಾರರ ಮೇಲೆ ತಮ್ಮ ಪ್ರಾಧಾನ್ಯತೆಯನ್ನು ಕಾಪಾಡಿಕೊಂಡು ಬರಲು ಭೂಮಾಲಕರು ನಡೆಸಿದ ಸಾಯುಧ ಆಕ್ರಮಣವೆಂಬ ಸತ್ಯವನ್ನು ಹೊರಗೆಡಹಿತು.

ಬೆಲ್ಚಿ ಘಟನೆಯು ಸ್ಥಾಪಿತ ಹಿತಾಸಕ್ತಿಗಳು ಹರಿಜನರ ವಿರುದ್ಧ ನಡೆಸುತ್ತಿರುವ ದುರಾಕ್ರಮಣಗಳಿಗೆ ಒಂದೇ ಉದಾಹರಣೆಯಲ್ಲ. ಜೂನ್ 18-19ರಂದು ಬಿಹಾರಿನ ಪಥಡ್ಡಾದಲ್ಲಿ ಕನಿಷ್ಟ ವೇತನ ಮಸೂದೆಯನ್ವಯ ಹೆಚ್ಚು ಕೂಲಿ ಬೇಡಿದ್ದಕ್ಕಾಗಿ ಹರಿಜನರನ್ನು ಚೆನ್ನಾಗಿ ಥಳಿಸಿ ಒಂದು ಕೋಣೆಯಲ್ಲಿ ಕೂಡಿಹಾಕಲಾಯಿತಲ್ಲದೆ ಅವರಿಗೆ ಕುಡಿಯುವ ನೀರನ್ನೂ ನಿರಾಕರಿಸಲಾಗಿತ್ತು. ಬಿಹಾರಿನ ಪಚ್ಚಿಡಿ ಗ್ರಾಮದ ಓರ್ವ ಜಮೀನುದಾರನ ಗದ್ದೆಗಳಲ್ಲಿ ಕೆಲಸ ಮಾಡಲು ನಿರಾಕರಿಸಿದ್ದಕ್ಕಾಗಿ ಹರಿಜನರ ವಸತಿಗಳನ್ನು ಸುಡಲಾಯಿತು.

ಭೂಮಾಲಕರ ಆಕ್ರೋಶದವಿರುದ್ಧ ಹರಿಜನರಿಗೆ ರಕ್ಷಣೆ ನೀಡಬೇಕಾದ ಪೊಲೀಸರು ಭೂಮಾಲಕರೊಂದಿಗೇ ಸೇರಿಕೊಳ್ಳುತ್ತಾರಲ್ಲದೆ ತಮ್ಮ ಹೆಚ್ಚಿನ ವೇಳೆಯನ್ನು ಹರಿಜನರ ವಿರುದ್ಧ ಅಪರಾಧಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಕಳೆಯುತ್ತಿದ್ದಾರೆ,

ತಮ್ಮ ಮೇಲಾದ ಅತ್ಯಾಚಾರಗಳನ್ನು ವರದಿ ಮಾಡಲು ಹೋಗುವ ಹರಿಜನರಿಗೆ ಪೋಲೀಸರಿಂದ ದೊರೆಯುವುದು ಗಾಢ ಜಾತಿ ದ್ವೇಷಗಳನ್ನು ಹೊಂದಿದ ತಿರಸ್ಕಾರ ಮಾತ್ರ. ಹರಿಜನರ ವಿರುದ್ಧ ಪೋಲೀಸರು ಎಸಗಿರುವ ಅಪರಾಧಗಳಿಗೆ ಬೇಕಾದಷ್ಟು ನಿದರ್ಶನಗಳಿವೆ. ಅವುಗಳಿಂದ ವ್ಯಕ್ತವಾಗುವಅಂಶವೆಂದರೆ ಸ್ವತಃ ಅತಿ ಕ್ರೂರಿಗಳಾಗಿ ತರಬೇತು ಹೊಂದಿದ ಪೋಲೀಸರ ಕ್ರೌರ್ಯ ಹರಿಜನರ ವಿರುದ್ಧ ಇನ್ನಷ್ಟು ಉಗ್ರವಾಗಿರುತ್ತದೆ.

ನವೆಂಬರ್ 26, 1976ರಂದು ಬಿಹಾರಿನ ಜಹಾನಾಬಾದಿನಲ್ಲಿ ಓರ್ವ ಪೋಲೀಸ್ ಸೂಪರಿಂಟೆಂಡೆಂಟ್ ಕೆಲವು ಮಂದಿ ನಗ್ನ ಹರಿಜನ ಹೆಂಗಸರನ್ನು ಹೊಡೆದು, ಬಿಸಿ ಕಬ್ಬಿಣದ ಸಲಾಕೆಗಳಿಂದ ಚಿತ್ರಹಿಂಸೆಕೊಟ್ಟ. ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಒಂದುಹಳ್ಳಿಯಲ್ಲಿ ಮೂವರು ಹರಿಜನರನ್ನು ಕಳವಿನ ಆಪಾದನೆಯ ಮೇರೆಗೆ ಜೂನ್ 24, 1977ರಂದು ಬಂಧಿಸಲಾಯಿತು. ಬಂಧನದಲ್ಲಿದ್ದಾಗ ಅವರನ್ನು ನಿಷ್ಕರುಣೆಯಿಂದ ಹೊಡೆಯಲಾಗಿತ್ತು ಮತ್ತು ಅವರಲ್ಲೊಬ್ಬನ ಕಳೇಬರವು ಅವನ ಮನೆಯ ಹತ್ತಿರದ ಬಾವಿಯಲ್ಲಿಸಿಕ್ಕಿತು. ಇದು ಆಗಸ್ಟ್ 11, 1977ರ ಹಿಂದು ಸ್ಟಾನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ಇಂತಹ ಘಟನೆಗಳನ್ನು ಹೇಳುತ್ತಾ ಹೋಗಬಹುದಾದರೂ, ಅವೆಲ್ಲವುಗಳಿಂದ ವ್ಯಕ್ತವಾಗುವ ಅಂಶ ಒಂದೇ– ಹರಿಜನರ ಕರುಣಾಜನಕ ಸ್ಥಿತಿ ಮತ್ತು ಇದನ್ನು ಸುಧಾರಿಸಲು ಯೋಗ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆಯೆನ್ನುವ ಸರಕಾರಗಳ ಹೆಗ್ಗಳಿಕೆಗಳ ಟೊಳ್ಳುತನ, ಬಂಡವಾಳಶಾಹಿ-ಭೂಮಾಲಕ ಆಳ್ವಿಕೆಯಲ್ಲಿ, ಅಧಿಕಾರವು ಯಾವ ಪಕ್ಷದ ಕೈಯಲ್ಲಿದ್ದರೂ, ಹರಿಜನರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕೈಗೊಂಡ ಕ್ರಮಗಳು ಅತ್ಯಲ್ಪ. ಅವರ ಅವಮಾನಕರ ಬದುಕಿಗೆ ಇದೇ ಮೂಲಕಾರಣ. ಭೂಹೀನರಿಗೆ ಭೂಮಿ ನೀಡುವ ಸಲುವಾಗಿ ಪಾಸು ಮಾಡಲ್ಪಟ್ಟ ಭೂಸುಧಾರಣೆಗಳು, ಕನಿಷ್ಟ ವೇತನ ಮಸೂದೆ ಮತ್ತು ಇಂತಹ ಇತರ ಕ್ರಮಗಳಿಗೆ ಅತಿಯಾದ ಪ್ರಚಾರ ಸಿಕ್ಕಿದೆಯಾದರೂ, ಅವೆಲ್ಲವೂ ಹೇಳುವವರು ಕೇಳುವವರಿಲ್ಲದೆ ಮೂಲೆಗೆಸೆಯಲ್ಪಟ್ಟಿವೆ. ಬಂಡವಾಳಶಾಹಿ-ಭೂಮಾಲಕ ಪಕ್ಷಗಳ ನಾಯಕತ್ವವು ಸ್ಥಾಪಿತ ಹಿತಾಸಕ್ತಿಗಳಿಗೆ ಅತ್ಯಂತ ಲಜ್ಜಾಹೀನ ರೀತಿಯಲ್ಲಿ ಆಶ್ರಯ ನೀಡುತ್ತಿವೆ.

ಜೀತ ಪದ್ಧತಿ ನಿರ್ನಾಮವಾಗಿದೆಯೆಂಬ ಘೋಷಣೆ ಕೇಳಿಬಂದರೂ, ಜೀತದಾಳುಗಳ ಒಂದು ಬೃಹತ್ ಪಡೆಯೇ ಇದೆ ಮತ್ತು ಅದರಲ್ಲಿ ಶೇ. 85ರಷ್ಟು ಹರಿಜನರಿದ್ದಾರೆ. ಶಾಶ್ವತ ಸಾಲದಲ್ಲಿ ಮುಳುಗಿರುವ ಅನೇಕ ಹರಿಜನರು ದಾಸ್ಯ ಜೀವನದೆಡೆಗೆ ಒಯ್ಯಲ್ಪಡುತ್ತಿದ್ದಾರೆ.

ಆದರೆ ಇವೆಲ್ಲವುಗಳಲ್ಲಿ ಯೂ ಹೊಸದೊಂದು ಅಂಶ ಕಾಣಲಾರಂಭಿಸಿದೆ. ಹರಿಜನರ ವಿರುದ್ಧ ಹೆಚ್ಚುತ್ತಿರುವ ಹಿಂಸಾತ್ಮಕ ಘಟನೆಗಳು ಅವರ ಪ್ರಜ್ಞೆಯಲ್ಲಿ ಆಗುತ್ತಿರುವ ಸೂಕ್ಷ್ಮ ಬದಲಾವಣೆಯ ಸೂಚನೆಯಾಗಿದೆ. ಪ್ರಜಾಸತ್ತಾತ್ಮಕ ಪ್ರಜ್ಞೆಯ ಬೆಳವಣಿಗೆಯೊಂದಿಗೇ ಅದು ಎಷ್ಟೇ ಕೀಳುಮಟ್ಟದ್ದಾದರೂ, ದಬ್ಬಾಳಿಕೆಗಳಿಗೆ ಅವರು ದೈನ್ಯದಿಂದ ಶರಣಾಗದಿರುವುದನ್ನು ಕಾಣಬಹುದು. ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ದಬ್ಬಾಳಿಕೆಗೆ ಅವರ ತೀವ್ರ ಪ್ರತಿಭಟನೆ ತೋರಿ ಬರುತ್ತಿದ್ದು, ಶೋಷಕ ವರ್ಗದ ಆಗ್ರಹಕ್ಕೆ ಇದೇ ಕಾರಣವಾಗಿದೆ.

ಹರಿಜನರ ಜೀವನ ಪರಿಸ್ಥಿತಿ ಮತ್ತು ಅವರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳಿಂದ ಕಂಡುಬರುವ ಇನ್ನೊಂದು ಅಂಶವೆಂದರೆ, ಭೂಸಂಬಂಧ ವಿವಾದಗಳಾಗಲೀ, ಶತಮಾನಗಳ ದಬ್ಬಾಳಿಕೆ ಹಾಗೂ ದಾಸ್ಯದ ವಿರುದ್ಧ ಸಂಘಟಿತ ಚಳುವಳಿಯಾಗಲೀ, ಜಾತಿದ್ವೇಷ ಪ್ರಧಾನ ಪಾತ್ರ ವಹಿಸುತ್ತದೆ. ಉಚ್ಚ ಜಾತಿಯ ಹಳ್ಳಿಯ ಶ್ರೀಮಂತರು ಇಂತಹ ಕಲಹಗಳನ್ನು ಅಥವಾ ಪ್ರತಿಭಟನೆಗಳನ್ನು ಜಾತಿದ್ವೇಷದ ಪ್ರವಾಹದೆಡೆಗೆ ತಿರುಗಿಸುತ್ತಾರೆ. ಇದರಿಂದ ನಿಜವಾದ ಶೋಷಣೆಯ ಮೂಲಗಳನ್ನು ಬಚ್ಚಿಡುವ ಮತ್ತು ಶ್ರಮಜೀವಿಗಳ ಐಕ್ಯತೆಯನ್ನು ಮುರಿಯುವ ಇವರ ಇಬ್ಬಗೆಯ ಉದ್ದೇಶಗಳೂ ಸಫಲವಾಗುತ್ತವೆ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 32 ವರ್ಷಗಳು ಸಂದ ಬಳಿಕವೂ, ಅಸ್ಪೃಶ್ಯತೆಯನ್ನು ಒಂದು ಪಾಪವೆಂದು ಗಾಂಧೀಜಿ ಕರೆದು ಅರ್ಧ ಶತಮಾನ ಸಂದರೂ, ಇನ್ನೂ ಮುಂದುವರಿಯುತ್ತಿರುವ ಹರಿಜನರ ಮೇಲಿನ ಅಮಾನುಷ ದಬ್ಬಾಳಿಕೆಯು, ಹಳ್ಳಿಗಳಲ್ಲಿ ಇನ್ನೂ ಉಳಿದಿರುವ ಪಾಳೆಯಗಾರಿ ಮತ್ತು ಅರೆಪಾಳೆಯಗಾರಿ ಭೂಮಾಲಕತ್ವದ ರೂಪವಾಗಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹುಟ್ಟಿಕೊಂಡಿದ್ದ ಜಾತಿಪದ್ಧತಿಯ ವಿರುದ್ಧದ ಎಲ್ಲಾ ಹೋರಾಟಗಳ ಅಪಯಶಸ್ಸಿಗೆ ಕಾರಣ ಅವುಗಳು ಭೂಸಂಬಂಧ ಹೋರಾಟಗಳ ಜತೆ ಸೇರದಿದ್ದುದು.

ಸ್ವಾತಂತ್ರ್ಯಾನಂತರ ಆಳುವ ವರ್ಗಗಳಿಗೆ ಜಾತಿಪದ್ಧತಿಯನ್ನು ನಿರ್ಮೂಲನಗೊಳಿಸದೆ ಜಾತಿ ಸಮಾನತೆಯ ಮಂತ್ರವನ್ನು ಹಳ್ಳಿಯ ರೈತರ ನಡುವೆ ಮತ್ತು ಕೆಳಗಿನ ಹಂತದ ವಿವಿಧ ಜಾತಿಗಳ ಜನರ ನಡುವೆ ಪಸರಿಸುವ ಅವಶ್ಯಕತೆ ಒದಗಿತ್ತು. ಪಾಳೆಯಗಾರಿ ಭೂಸಂಬಂಧಗಳೊಡನೆ ರಾಜಿಮಾಡಿಕೊಳ್ಳುವ ಅವರ ಈ ಧೋರಣೆಗನುಗುಣವಾಗಿ ಬಂಡವಾಳಶಾಹಿ ನಾಯಕತ್ವವು, ಅದು ಕಾಂಗ್ರೆಸ್ ಮಾದರಿಯಾಗಲೀ ಅಥವಾ ಜನತಾ ಮಾದರಿಯಾಗಿರಲೀ, ಜಾತಿ ದಬ್ಬಾಳಿಕೆಯ ತಳಹದಿಯಾಗಿರುವ ಬಂಡವಾಳಶಾಹಿ ಪೂರ್ವದ ಭೂಸಂಬಂಧಗಳನ್ನು ನಿವಾರಿಸದೇ ಅಂತಹ ದಬ್ಬಾಳಿಕೆಯನ್ನು ಖಂಡಿಸುವ ನೀತಿಯನ್ನು ಅನುಸರಿಸುತ್ತದೆ.

ಬಂಡವಾಳಶಾಹಿ-ಭೂಮಾಲಕ ಆಳ್ವಿಕೆಯ ವಿರುದ್ಧ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೇರಿ ಹೋರಾಡುವಂತೆ ಹರಿಜನರಿಗೆ ಮತ್ತು ಅವರ ನಾಯಕರಿಗೆ ಭಾರತದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸದಾ ಕರೆ ನೀಡುತ್ತಿದೆ. ಬಂಡವಾಳಶಾಹಿ-ಭೂಮಾಲಕ ಪದ್ಧತಿಯನ್ನು ತೊಡೆದು ಹಾಕುವುದರ ಮೂಲಕ ಮಾತ್ರ ಹರಿಜನರ ಮೇಲಿನ ದಬ್ಬಾಳಿಕೆಗೆ ಶಾಶ್ವತ ಪರಿಹಾರ ಸಿಗಬಲ್ಲದು. ಪಾಳೆಯಗಾರಿ ಮತ್ತು ಅರೆಪಾಳೆಯಗಾರಿ ಶೋಷಣಾ ವ್ಯವಸ್ಥೆಯ ನಿರ್ಮೂಲನ ಮತ್ತು ಪ್ರಜಾಸತ್ತಾತ್ಮಕ ಸಮಾಜದ ಪುನರ್ನಿರ್ಮಾಣವು ಜಾತಿಪದ್ಧತಿಯ ವಿರುದ್ಧದ ಹೋರಾಟವು ವರ್ಗ ಹೋರಾಟದೊಡನೆ ಬೆರೆಯುವುದರಿಂದ ಮಾತ್ರ ಸಾಧ್ಯವೆಂಬುದು ಸಿ.ಪಿ.ಐ.(ಎಂ)ನ ಅಭಿಮತ.

ಹರಿಜನರಿಗೆ, ಗಿರಿಜನರಿಗೆ ಮತ್ತು ಇತರ ಹಿಂದುಳಿದ ಜನರಿಗೆ ಉದ್ಯೋಗಗಳ ಮೀಸಲಾತಿ ಮತ್ತು ವಿದ್ಯಾ ಸೌಲಭ್ಯಗಳ ಮೀಸಲಾತಿಗಳು ಮುಂದುವರಿಯಬೇಕೆಂಬ ಬೇಡಿಕೆಗೆ ಸಿ.ಪಿ.ಐ. (ಎಂ)ನ ಪೂರ್ಣ ಬೆಂಬಲವಿದೆ. ಇಷ್ಟರವರೆಗೆ ಶೇ. 4.5ರಷ್ಟು ಮತ್ತು ಶೇ. 6.4 ರಷ್ಟು ಮಾತ್ರ ಮೊದಲ ದರ್ಜೆ ಮತ್ತು ದ್ವಿತೀಯ ದರ್ಜೆಯ ನೌಕರಿಗಳು ಹಿಂದುಳಿದ ವರ್ಗದ ಜನರಿಗೆ ಲಭಿಸಿವೆ.

ತಮ್ಮ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಬಂಡವಾಳಶಾಹಿ-ಭೂಮಾಲಕ ಪದ್ಧತಿಯ ಈ ಚೌಕಟ್ಟಿನಲ್ಲಿ ಕೈಗೊಳ್ಳಲಾಗುತ್ತಿರುವ ತಾತ್ಕಾಲಿಕ ಕ್ರಮಗಳಿಂದ ಮಾತ್ರ ಸಾಧ್ಯವೆಂಬ ಭ್ರಮೆಯಲ್ಲಿ ಮುಳುಗಿರುವ ಈ ಶ್ರಮಜೀವಿಗಳ ಪ್ರಜ್ಞೆಯನ್ನು ಜಾಗೃತಗೊಳಿಸಲು ಕಾರ್ಮಿಕ ವರ್ಗವು ಒಂದು ಸತತ ಸೈದ್ಧಾಂತಿಕ ಹೋರಾಟ ನಡೆಸಬೇಕಾದ ಅವಶ್ಯಕತೆ ಇದೆ. ಅವರನ್ನು ಸಾಮಾನ್ಯ ಶೋಷಕರ ವಿರುದ್ಧ ಐಕ್ಯ ಹೋರಾಟದ ಕಡೆಗೆ ಸೆಳೆಯಬೇಕಾಗಿದೆ.

●

"ಕಡ್ಡಾಯ ಡೊನೇಶನ್ ದೊಡ್ಡ ಸುಲಿಗೆ"

ಕುಂದಾಪುರದಲ್ಲಿ ಎಸ್. ಎಫ್. ಐ. ಕರಪತ್ರ ಹೋರಾಟ

ಕುಂದಾಪುರ ತಾಲ್ಲೂಕಿನ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಕಳೆದ ಹತ್ತಾರು ವರ್ಷಗಳಿಂದ ನಿರಂತರವಾಗಿ ಕಡ್ಡಾಯ ಡೊನೇಶನ್ ರೂಪದಲ್ಲಿ ವಿದ್ಯಾರ್ಥಿಗಳ (ಅವರ ಪಾಲಕರ) ಸುಲಿಗೆ ನಡೆಯುತ್ತಿದೆ. ಡೊನೇಶನ್ (ಸಹಾಯ ಧನ) ಹಣವನ್ನು ಫೀಸುಗಳಂತೆ ಕಡ್ಡಾಯಪಡಿಸಿರುವುದರಿಂದ ಸ್ಥಳೀಯ ಕಾರ್ಮಿಕರ, ರೈತರ ಮತ್ತು ಬಡವರ ಮನೆಯ ಮಕ್ಕಳಿಗೆ ಕಾಲೇಜು ಮೆಟ್ಟಲೇರಲು ದುಸಾಧ್ಯವಾಗಿದೆ. ಕಾಲೇಜು ಆರಂಭವಾದ ವರ್ಷಗಳಲ್ಲಿ ರೂ. 75 ಇದ್ದ ಡೊನೇಶನ್ ನಂತರ ರೂ. 100ಕ್ಕೆ ಏರಿತು. ಈಗ ರೂ. 125ಕ್ಕೆ ಏರಿನಿಂತಿರುವ ಈ ಡೊನೇಶನ್ ಮುಂದಿನ ವರ್ಷಗಳಲ್ಲಿ ರೂ. 150 ರಿಂದ 200ಕ್ಕೆ ಏರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಖಾಸಾಗಿ ವ್ಯಕ್ತಿಗಳ ಕೈಯಲ್ಲಿರುವ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ನಡೆಯುತ್ತಿರುವ ಈ ಡೊನೇಶನ್ ರೂಪದ ಶೋಷಣೆಯ ವಿರುದ್ಧ ಪ್ರತಿಭಟಿಸಿ ಹಿಂದೆ ಕೆಲವು ಹೋರಾಟಗಳು ನಡೆದಿದ್ದವು. ಆದರೆ ಕ್ರೂರ ವ್ಯವಸ್ಥೆ ಅದನ್ನು ಸಮರ್ಥವಾಗಿ ಹತ್ತಿಕ್ಕಿತು.

ಭಂಡಾರ್ಕಾರ್ಸ್ ಕಾಲೇಜು ಪ್ರತಿ ವರ್ಷ ಹೊರಡಿಸುವ ಕಾಲೇಜು ಕ್ಯಾಲೆಂಡರಿನಲ್ಲಿ ಕಾಲೇಜಿಗೆ ಕೊಡಬೇಕಾಗಿರುವ ಫೀಸುಗಳ ವಿವರಗಳನ್ನು ಮಾತ್ರ ಕೊಡಬೇಕಾಗಿರುವ ಫೀಸುಗಳಂತೆ ಡೊನೇಶನ್ ಕೊಡಬೇಕೆಂಬ ವಿಷಯವನ್ನೇ ಪ್ರಸ್ತಾಪಿಸಿಲ್ಲ. ಮೋಸದ ಗುಟ್ಟು ಇಲ್ಲೇ ಅಡಗಿದೆ. ಮತ್ತೊಂದು ಗಮನಾರ್ಹ ವಿಚಾರವೆಂದರೆ, ಡೊನೇಶನ್ ರೂಪದಲ್ಲಿ ವಸೂಲಿಯಾಗುವ ಹಣದ ಬಗ್ಗೆ ಸಂಬಂಧಪಟ್ಟವರು ಸರಕಾರಕ್ಕಾಗಲಿ, ವಿಶ್ವವಿದ್ಯಾನಿಲಯಕ್ಕಾಗಲಿ, ಸಾರ್ವಜನಿಕರಿಗಾಗಲಿ ಲೆಕ್ಕ ಪತ್ರಗಳನ್ನು ತೋರಿಸುತ್ತಿಲ್ಲ. ವಸೂಲಾದ ಹಣ ಎಲ್ಲಿಗೆ ಹೋಗುತ್ತದೆ ಎಂಬುದು ಸಾರ್ವಜನಿಕರ ಪಾಲಿಗೆ ವಿಸ್ಮಯಕರ ಸಂಗತಿಯಾಗಿದೆ. ಈಗಾಗಲೇ ಇದೇ ಕಾಲೇಜಿನ ಓರ್ವ ವಿದ್ಯಾರ್ಥಿನಿ ಡೊನೇಶನ್ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡಿ ಜಯಪಡೆದು ಡೊನೇಶನ್ ಕೊಡದೇನೆ ಕಾಲೇಜಿಗೆ ಪ್ರವೇಶ ಪಡೆದುಕೊಂಡಿದ್ದಾಳೆ. ಈ ಎಲ್ಲಾ ವಿಚಾರಗಳ ಬಗ್ಗೆ ವಿದ್ಯಾರ್ಥಿಗಳ ಮತ್ತು ಅವರ ಪಾಲಕರ ಗಮನ ಸೆಳೆದು ಅವರನ್ನು ಹೋರಾಟದ ಹಾದಿಯಲ್ಲಿ ಕೊಂಡೊಯ್ಯುವಂತೆ ಮಾಡಲು ಕುಂದಾಪುರ ತಾಲ್ಲೂಕು ಎಸ್. ಎಫ್. ಐ. ಘಟಕವು 2000 ದಷ್ಟು ಕರಪತ್ರಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ಹಂಚಿದೆ.

ಕಡ್ಡಾಯ ಡೊನೇಶನ್ ದೊಡ್ಡ ಸುಲಿಗೆ. ಇದು ಅನ್ಯಾಯ ಮತ್ತು ಶೋಷಣೆಯಾಗಿರುತ್ತದೆ. ತಮ್ಮ ಮುಗ್ಧತೆಯ ದುರುಪಯೋಗವಾಗದಂತೆ ವಿದ್ಯಾರ್ಥಿಗಳು ಜಾಗ್ರತರಾಗಬೇಕಾಗಿದೆ. ಮತ್ತು ವಿದ್ಯಾರ್ಥಿಗಳು ಪಾಲಕರು ಸಂಘಟಿತ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿರುವ ಕುಂದಾಪುರ ತಾಲ್ಲೂಕು ಎಸ್. ಎಫ್. ಐ. ಘಟಕವು ಸರ್ವರ ಸರ್ವರೀತಿಯ ಬೆಂಬಲವನ್ನು ಯಾಚಿಸಿದೆ ಎಂಬುದಾಗಿ ಕುಂದಾಪುರ ತಾಲ್ಲೂಕು ಎಸ್. ಎಫ್. ಐ. ಕಾರ್ಯದರ್ಶಿ ಕಾಂ. ಆರ್. ಜಯಕುಮಾರ್ ವರದಿ ಮಾಡಿರುವರು.

○

ಸಂಯುಕ್ತ ಕರ್ನಾಟಕ ನೌಕರರಿಗೆ ಬೆಂಬಲ

ತಾರೀಕು 10-2-80ರಂದು ಚುನಾವಣಾಫಲಿತಾಂಶದ ಹಿನ್ನೆಲೆಯಲ್ಲಿ ಹಾಗೂ ರಾಜ್ಯ ಸಮಿತಿ ಸಭೆಯ ತೀರ್ಮಾನಗಳನ್ನು ಜಾರಿಗೊಳಿಸುವುದರ ಬಗ್ಗೆ ಚರ್ಚಿಸಲು ಸಭೆ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು ಹೋರಾಟದ ಪಥದಲ್ಲಿರುವ ಇತ್ತೀಚೆಗೆ ಮುಚ್ಚಲ್ಪಟ್ಟ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ದುಡಿಯುತ್ತಿದ್ದ ನೌಕರರಿಗೆ ತನ್ನ ಸಂಪೂರ್ಣ ಬೆಂಬಲವಿತ್ತಿದೆ. ಮುಚ್ಚಲ್ಪಟ್ಟ ಸಂಸ್ಥೆಯನ್ನು ತೆರೆಯುವ ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿ ಕೆಲಸ ಕಳೆದುಕೊಂಡ ಸುಮಾರು 250ಮಂದಿ ಸತ್ಯಾಗ್ರಹ ನಡೆಸುತ್ತಲಿದ್ದಾರೆ, ಇವರಹೋರಾಟಕ್ಕೆ ಎಲ್ಲಾ ರೀತಿಯ ಬೆಂಬಲವೀಯಲು ನಗರದ ಕಾರ್ಮಿಕ ವರ್ಗಕ್ಕೂ, ಎಲ್ಲಾ ಜನತೆಗೂ ಜಿಲ್ಲಾ ಸಮಿತಿ ಕರೆ ನೀಡಿದೆ.

ಸಂಘಟನೆಯ ಬಗ್ಗೆ ಚರ್ಚೆನಡೆದಿದ್ದ ಈ ಜಿಲ್ಲಾ ಸಮಿತಿ ಸಭೆಯಲ್ಲಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ.ಕೆ. ಭಟ್ ಉಪಸ್ಥಿತರಿದ್ದರು.

●

ಕೇಂದ್ರ ಸಮಿತಿ ಕರೆ

[3ನೇ ಪುಟದಿಂದ]

ಸರ್ವಾಧಿಕಾರಿ ಧೋರಣೆಯ ಒಂದು ಕಡೆ ಜನವಿರೋಧಿ ನೀತಿಯನ್ನು ತಳೆಯುವುದು, ಮತ್ತೊಂದು ಕಡೆ ಕಾರ್ಮಿಕ ವರ್ಗ ಮತ್ತಿತರ ದುಡಿಯುವ ಜನತೆಯ ಮೇಲೆ ಪ್ರಹಾರ ನಡೆಸುವುದು. ಈ ಎರಡು ಧೋರಣೆಗಳು ಪರಸ್ಪರ ಹೆಣೆದುಕೊಂಡಿವೆ. ಆದ್ದರಿರದ ದುಡಿಯುವ ವರ್ಗದ ಪ್ರಾಣ ಮತ್ತು ಸ್ವಾತಂತ್ರ್ಯವನ್ನು ಉಳಿಸಲು ಬದ್ಧವಾಗಿರುವ ಸಾಮೂಹಿಕ ಸಂಘಟನೆಗಳು ಕಾರ್ಮಿಕ, ರೈತ, ಮತ್ತಿತರ ದುಡಿಯುವವರ ಆರ್ಥಿಕ ಬೇಡಿಕೆಗಳ ಜೊತೆಯಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಣೆ ಹಾಗೂ ವಿಸ್ತರಣೆಗಾಗಿ ಅವರು ಹೋರಾಡುವಂತೆ ಮಾಡಬೇಕು. ಆದ್ದರಿಂದ ಕೇಂದ್ರ ಸಮಿತಿಯು ಎಲ್ಲಾ ಕಾರ್ಮಿಕ ಸಂಘಟನೆಗಳು ರೈತಸಂಘಟನೆಗಳು ಮತ್ತಿತರ ಸಾಮೂಹಿಕ ಸಂಘಟನೆಗಳು ಪರಸ್ಪರ ಐಕ್ಯತೆ ಬೆಳಸುವುದರ ಜೊತೆಯಲ್ಲಿ ಉಳಿದ ಪ್ರಜಾಸತ್ತಾತ್ಮಕ ಚಳುವಳಿಯೊಂದಿಗೂ ಸಖ್ಯತೆಯನ್ನು ಬೆಳೆಸಿ ಎಲ್ಲಾ ಜನತೆಯ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳಿಗಾಗಿ ಹೋರಾಡಬೇಕೆಂದು ಕರೆ ನೀಡಿದೆ.

ಎಡಪಕ್ಷಗಳ ಜವಾಬ್ದಾರಿ:

ಬರಲಿರುವ ದಿನಗಳಲ್ಲಿ ಬೆಳೆದು ಬರುವ ಹೋರಾಟಗಳಿಗೆ ನೇತೃತ್ವ ನೀಡುವ ಜವಾಬ್ದಾರಿ ಸಿ.ಪಿ.ಐ.(ಎಂ) ಮತ್ತಿತರ ಎಡಪಕ್ಷಗಳ ಮೇಲಿದೆ. ಈ ಹೋರಾಟವನ್ನು ಜಂಟಿಯಾಗಿ ಸಂಸತ್ತಿನಲ್ಲೂ ಮುಂದುವರಿಸಬೇಕಾಗಿದೆ. ಈ ದಿಸೆಯಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದ್ದು ಸಂಸತ್ತಿನಲ್ಲಿರುವ ಎರಡು ಸದನಗಳಲ್ಲಿ ಎಲ್ಲಾ ಎಡಪಕ್ಷಗಳ ಚಟುವಟಿಕೆಗಳನ್ನು ಪರಸ್ಪರ ಪೂರಕಗೊಳಿಸಲು ಒಂದು ಸಮನ್ವಯ ಸಮಿತಿಯನ್ನು ರಚನೆ ಮಾಡಿದೆ. ಸಂಸತ್ತಿನ ಹೊರಗೆ ಮತ್ತು ಒಳಗೆ ಬೆಳೆದು ಬರುತ್ತಿರುವ ಹೋರಾಟಗಳಿಗೆ ಸಂಯುಕ್ತ ನಾಯಕತ್ವ ನೀಡುವುದರ ಮೂಲಕ ಎಡಪಕ್ಷಗಳ ಐಕ್ಯತೆ ಮತ್ತಷ್ಟು ಭದ್ರವಾಗುವುದೆಂದು ಕೇಂದ್ರ ಸಮಿತಿ ಆಶಿಸಿದೆ.

ಸಂಸತ್ತಿನಲ್ಲಿರುವ ವಿವಿಧ ವಿರೋಧ ಪಕ್ಷಗಳು ಮತ್ತು ಗುಂಪುಗಳ ನಡುವೆ ಪರಸ್ಪರ ಸಹಕಾರ ಬೆಳೆಸಿ ಸರ್ವಾಧಿಕಾರಿ ಶಕ್ತಿಗಳನ್ನು ಎದುರಿಸುವಲ್ಲಿ ಸಿ.ಪಿ.ಐ (ಎಂ) ಹಾಗೂ ಇತರೆ ಎಡ ಪಕ್ಷಗಳು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿದೆ. ಚುನಾವಣಾ ನಂತರದ ಪರಿಸ್ಥಿತಿಯನ್ನು ಎದುರಿಸಲು ಸರ್ವಾಧಿಕಾರವನ್ನು ವಿರೋಧಿಸುವ ಎಲ್ಲಾ ಶಕ್ತಿಗಳ ಒಂದು ವಿಶಾಲರಂಗವನ್ನು ಕಟ್ಟಬೇಕಾಗಿದೆ.

ಈ ಸಂದರ್ಭದಲ್ಲಿ ಸಿ.ಪಿ.ಐ. (ಎಂ) ನೇತೃತ್ವದ ಮೂರು ರಾಜ್ಯಸರಕಾರಗಳು ವಿಶಿಷ್ಟ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ಅವುಗಳ ವರ್ತನೆಯಿಂದ ಪ್ರತಿಯೊಂದು ರಾಜ್ಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಬೆಳೆಯಬೇಕು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ದೇಶಕ್ಕೆ ಬದಲಿಯಾಗಬಲ್ಲವು ಎಂಬುದನ್ನು ತೋರಿಸಬೇಕು ಹಾಗೂ ಹೆಚ್ಚು,ಹೆಚ್ಚು ಜನರನ್ನು ಈ ಬದಲಿಯಾದ ಶಕ್ತಿಗೆ ಸೇರಿಸಬೇಕು. ಜನಸಾಮಾನ್ಯರ ಹಿತದೃಷ್ಟಿಯಿಂದ ಕೆಲವು ಸಾಮಾನ್ಯ ಸಮಸ್ಯೆಗಳು ಬಂದಾಗ ಕೇಂದ್ರ ಸರಕಾರಕ್ಕೆ ಸಹಕಾರ ನೀಡಲು ನಾವು ಹಿಂದೆಗೆಯಬಾರದು. ಅದೇವೇಳೆ ಜನವಿರೋಧಿ ನೀತಿಗಳನ್ನು, ರಾಜ್ಯ ಸರಕಾರದ ಅಧಿಕಾರಗಳನ್ನು ಮೊಟಕುಗೊಳಿಸುವ ಕ್ರಮಗಳನ್ನು ವಿರೋಧಿಸಬೇಕು. ಕಾಂಗ್ರೆಯೇತರ ಎಲ್ಲಾ ರಾಜ್ಯ ಸರಕಾರಗಳು ಒಂದಾಗಿ ಇಡೀ ದೇಶದಲ್ಲಿ ರಾಜ್ಯ ಸರಕಾರಗಳು ತಮ್ಮ ಸ್ವಾಯತ್ತತೆಯನ್ನು ಉಳಿಸಿಕೊಳ್ಳಲು ಹೋರಾಡಬೇಕು.

ಸಂಘಟನೆ:

ಕೇಂದ್ರ ಸಮಿತಿಯು ಪಕ್ಷದ ಎಲ್ಲಾ ರಾಜ್ಯ, ಜಿಲ್ಲಾ ಹಾಗೂ ಕೆಳಗಿನ ಘಟಕಗಳು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ, ದುಡಿಯುವ ವರ್ಗದ ಸಂಘಟನೆಗಳ ಐಕ್ಯತೆ, ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ಐಕ್ಯತೆಯನ್ನು ಬಲಪಡಿಸಲು ಶ್ರಮಿಸಬೇಕೆಂದು ಕರೆ ನೀಡಿದೆ. ಈ ಐಕ್ಯತೆಯೇ ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಬಲ್ಲದು.

ಈ ಜವಾಬ್ದಾರಿಗಳನ್ನು ಕಾರ್ಯಗತಗೊಳಿಸಲು ಪಕ್ಷದ ಸಂಘಟನೆಯನ್ನು ಕಳೆದ ವರ್ಷ ನಡೆದ ಸಲ್‌ಕಿಯಾ ಪ್ಲೀನಂನ ತೀರ್ಮಾನಗಳ ಆಧಾರದ ಮೇಲೆ ಮತ್ತಷ್ಟು ಬಲಪಡಿಸಬೇಕಾಗಿದೆ ಎಂಬುದನ್ನು ಪಕ್ಷದ ಸದಸ್ಯರಿಗೆ ಹಾಗೂ ಸ್ನೇಹಿತರಿಗೆ ಮತ್ತೊಮ್ಮೆ ಕೇಂದ್ರ ಸಮಿತಿ ಜ್ಞಾಪಿಸಿದೆ.

●

ಜನತೆಯ ಸಮಸ್ಯೆಗಳ ನಿವಾರಣೆಗಾಗಿ ಜಿಲ್ಲೆಯಾದ್ಯಂತ ಹೋರಾಡಲು ಕರೆ

ಇತ್ತೀಚಿನ ಲೋಕಸಭಾ ಚುನಾವಣಾ ಫಲಿತಾಂಶ ಮತ್ತು ಕೆಲವೇ ದಿನಗಳ ಹಿಂದೆ ನಡೆದ ಕೇರಳ ವಿಧಾನ ಸಭಾ ಚುನಾವಣಾ ಫಲಿತಾಂಶಗಳು ಎಡಪಕ್ಷಗಳೂ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳೂ ಬಲಿಷ್ಟವಾಗಿ ಬೆಳೆದು, ಒಂದಾಗಿ ನಿಂತಲ್ಲಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಅಥವಾ ಇನ್ನಾವುದೇ ಭೂಮಾಲಕ–ಬಂಡವಾಳಶಾಹಿ ಪಕ್ಷಗಳಿಗೆ ಪರಿಣಾಮಕಾರಿ ಸವಾಲನ್ನೊಡ್ಡುವುದು ಸಾಧ್ಯ ಎಂದು ತೋರಿಸಿವೆ. ಕರ್ನಾಟಕದಲ್ಲಿ ಎಡ ಪಕ್ಷಗಳು ಇನ್ನೂ ಪ್ರಬಲ ಶಕ್ತಿಯಾಗಿ ಬೆಳೆದಿಲ್ಲ. ಅಧಿಕಾರದಲ್ಲಿರುವ ಪಕ್ಷವಂತೂ ಜನತೆಯ ಮನಸ್ಸನ್ನು ಬೇರೆಡೆಗೆ ಕೊಂಡೊಯ್ಯುವ ತಂತ್ರವನ್ನು ಹೂಡಿದೆ. ಈ ಸಂದರ್ಭದಲ್ಲಿ ನಾವು ನಮ್ಮ ಪಕ್ಷವನ್ನು ಬಲಪಡಿಸಿ, ಜನತೆಯ ಸಮಸ್ಯೆಗಳ ನಿವಾರಣೆಗಾಗಿ ಹೋರಾಡಬೇಕಾಗಿದೆ. ಜನತೆಯೊಡನೆ ಸಂಪರ್ಕವನ್ನು ಬೆಳೆಸಿ, ಜನರ ವಿಶ್ವಾಸಕ್ಕೆ ಪಾತ್ರರಾಗಬೇಕಾಗಿದೆ.

ಕೋಲಾರ ಜಿಲ್ಲೆಗೆ ಹೋರಾಟದ ಪರಂಪರೆ ಇದೆ. ಮತ್ತೆ ಜಿಲ್ಲೆಯಾದ್ಯಂತ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ತೀವ್ರ ಚಳುವಳಿಗಳನ್ನು ನಡೆಸಬೇಕು. ಹೋರಾಟಗಳ ಪರಂಪರೆ, ಹಿಂದಿನ ಅನುಭವಗಳನ್ನು ಸೇರಿಸಿಕೊಂಡು ಹೊಸ ಕ್ರಮದಲ್ಲಿ ಶ್ರಮಪಟ್ಟರೆ ಜನತೆಯು ನಮ್ಮನ್ನು ಬೆಂಬಲಿಸುತ್ತದೆ ಎಂಬುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಸಮಿತಿ ಸಭೆಯನ್ನುದ್ದೇಶಿಸಿ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಹೇಳಿದರು. ಶಿಡ್ಲಘಟ್ಟ ತಾಲ್ಲೂಕಿನ ಕುಂದಲಗುರ್ಕಿಯಲ್ಲಿ 11-2-80ರಂದು ಸೇರಿದ್ದ ಜಿಲ್ಲಾ ಸಮಿತಿ ಸಭೆಯಲ್ಲಿ ಕಾಂ. ಎಂ. ಕೆ. ಭಟ್ ಮತ್ತು ಕಾಂ. ವಿ ಜೆ. ಕೆ. ನಾಯರ್ ಅವರು ಸೆಕ್ರೆಟಾರಿಯೆಟ್ ಪರವಾಗಿ ಭಾಗವಹಿಸಿದ್ದರು. ರಾಜ್ಯ ಸಮಿತಿ ಸಭೆಯ ತೀರ್ಮಾನಗಳನ್ನು ಕಾಂ. ಎಂ. ಕೆ. ಮತ್ತು ಕಾಂ. ವಿ. ಜೆ. ಕೆ. ಯವರು ಸಭೆಯ ಮುಂದಿಟ್ಟರು. ಸಭೆಯ ಅಧ್ಯಕ್ಷ ಸ್ಥಾನವನ್ನು ಕಾಂ. ಟಿ.ಎಸ್. ಮಣಿಯವರು ವಹಿಸಿದ್ದರು.

●

ಮುಜಫರ್ ಅಹ್ಮದ್ ಸ್ಮಾರಕ ಸ್ಪೋರ್ಟ್ಸ್ ಕ್ಲಬ್ ಉದ್ಘಾಟನೆ

ಭಾರತದ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ, ಬೆಳಸಿದ ಸಂಸ್ಥಾಪಕರಲ್ಲಿ ಒಬ್ಬರಾದ ಕಾಂ.ಮುಜಫರ್ ಅಹ್ಮದ್ ಸ್ಮಾರಕ ಸ್ಪೋರ್ಟ್ಸ್‌ಕ್ಲಬ್ ಕೊಡಗು ಜಿಲ್ಲೆ ವಿರಾಜಪೇಟೆ ತಾಲೋಕಿನ, ಚಾಮಿಯಾಲ್‌ನಲ್ಲಿ ತಾ॥ 10-2-80 ರಂದು ಪ್ರಾರಂಭವಾಯಿತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕಾಂ. ಕರುಣಾಕರನ್, ವಕೀಲರು ವಹಿಸಿದ್ದರು. ಚಾಮಿಯಾಲ್‌ನ ಯುವಕರು ಹಾಗೂ ಅರಮೇರಿಯ ಎ.ಕೆ.ಜಿ. ಸ್ಮಾರಕ ಲೈಬ್ರರಿಯ ಸದಸ್ಯರೇ ಅಧಿಕವಾಗಿ ಸೇರಿದ್ದ ಸಭೆಯಲ್ಲಿ ಮೌನಮಾಡಿದ ಸ್ಥಳೀಯ ಹಿರಿಯರು ಕ್ಲಬ್ ಪ್ರಾರಂಭವಾಗುವುದನ್ನು ಸ್ವಾಗತಿಸಿದರಲ್ಲದೆ, ಹಲವು ವರ್ಷಗಳ ಹಿಂದೆ ತಮಗೆಲ್ಲಾ ಕಮ್ಯುನಿಸ್ಟ್ ಪಕ್ಷವೆಂದರೆ ತಪ್ಪುಕಲ್ಪನೆಗಳಿದ್ದವು, ಈಗ ನಮಗೆ ಅರ್ಥವಾಗಿದೆ ಅದೆಲ್ಲಾ ಕೇವಲ ಸುಳ್ಳು ಪ್ರಚಾರ, ಕಮ್ಯುನಿಸ್ಟರಿಂದ ಮಾತ್ರ ಈ ದೇಶದ ಬಡಜನತೆಯ ಸಮಸ್ಯೆಗಳು ಬಗೆಹರಿಯಲು ಸಾಧ್ಯವೆಂದು ತಮಗೆ ಮನವರಿಕೆಯಾಗಿರುವುದಾಗಿ ನುಡಿದರು.

ಕ್ಲಬ್ ಕಛೇರಿಯನ್ನು ಉದ್ಘಾಟಿಸಿದ ಎಸ್.ಎಫ್.ಐ. ಅಧ್ಯಕ್ಷ ಮು. ಇಕ್‌ಬಾಲ್ ಹುಸೇನ್ ಉದ್ಘಾಟನಾ ಭಾಷಣ ಮಾಡುತ್ತಾ, ಕಾಂ. ಮುಜಫರ್ ಅಹ್ಮದ್ ಹೆಸರಿನಲ್ಲಿ ಕ್ಲಬ್ ಸ್ಥಾಪಿಸಿದರೆ ಸಾಲದು, ಅವರು ಯಾವ ಉದ್ದೇಶಗಳಿಗಾಗಿ ಹೋರಾಟ ಮಾಡಿದರೋ ಆ ಆದರ್ಶಗಳನ್ನು ಕ್ಲಬ್‌ನ ಸದಸ್ಯರು ಅನುಸರಿಸಬೇಕೆಂದು ತಿಳಿಸಿದರು. ಸಂಕ್ಷಿಪ್ತವಾಗಿ ಮುಜಫರ್ ಅಹಮದರ ಜೀವನ ಚರಿತ್ರೆಯನ್ನು ತಿಳಿಸಿದರು. ಸ್ಥಳೀಯ ಸಿ.ಪಿ.ಐ(ಎಂ) ಮುಖಂಡ ಕಾಂ. ಮುತ್ತಪ್ಪ (ನಿವೃತ್ತ ಡಿ.ಡಿ.ಪಿ.ಐ.) ಮಾತನಾಡಿ ಕ್ಲಬ್‌ನ ಚಟುವಟಿಕೆಗಳು ವಿಸ್ತಾರವಾಗಿ ಇತರ ಪ್ರದೇಶಗಳಿಗೂ ಹರಡಲಿ ಎಂದು ಹಾರೈಸಿದರು.. ಕಾಂ. ಕರುಣಾಕರನ್ ಮಲೆಯಾಳಂನಲ್ಲಿ ಮಾತನಾಡಿ ಬದಲಾಗುತ್ತಿರುವ ಸಮಾಜದಲ್ಲಿ ಪ್ರಮುಖ ಪಾತ್ರ ವಹಿಸಲು ಯುವಕರು ಮುಂದಾಗಬೇಕೆಂದು ಕರೆಯಿತ್ತರು.

ಕ್ಲಬ್‌ನ ಅಧ್ಯಕ್ಷರು ವಂದನಾರ್ಪಣೆ ಮಾಡಿದ ನಂತರ ಸಭೆ ಮುಗಿಯಿತು.

○

ಅಧಿಕಾರಿಗಳಿಂದ ಅಧಿಕಾರ ದುರುಪಯೋಗ

ಅರಮೇರಿ ಗ್ರಾಮದಲ್ಲಿ ಹರಿಜನ ಕಾಲೋನಿಯೊಂದು ಇದೆ. ಅದರಲ್ಲಿ ಒಟ್ಟು 32 ಬಡಕುಟುಂಬಗಳು ವಾಸ ಮಾಡುತ್ತಾರೆ. ಅದರಲ್ಲೂ ಒಟ್ಟು15 ಹುಲ್ಲಿನ ಮನೆಗಳು. ಮತ್ತು 17ಹಂಚಿನ ಮನೆಗಳು ಇವೆ ಸರಕಾರದ ನಿಯಮದ ಪ್ರಕಾರ ಎಲ್ಲಾ ಮನೆಗಳನ್ನು ರಿಪೇರಿ ಮಾಡಬೇಕಾಗಿದ್ದು ಆದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಒಂದು ಭೇಟಿ ನೀಡಿ, ಒಂದೊಂದು ಭಾಗವು ತೂಗಾಡುತ್ತಿರುವ ಮನೆಗಳನ್ನು ಬಿಟ್ಟು ಸ್ವಲ್ಪ ಉತ್ತಮ ಸ್ಥಿತಿಯಲ್ಲಿರುವ ಅದರಲ್ಲೂ 4 ಮನೆಗಳನ್ನು ರಿಪೇರಿ ಮಾಡಿಯೂ ಮಾಡದೇ ಹೋಗಿದ್ದಾರೆ. ಅಲ್ಲದೆ ಕಾಲೋನಿಗೆ ಬಂದಂತಹ ಸಾಮಾಗ್ರಿಗಳನ್ನು ಅಧಿಕಾರಿಗಳ ಉಪಯೋಗಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಈ ವಿಷಯವನ್ನು ತಿಳಿದ ಹರಿಜನ ನಿವಾಸಿಗಳು ವಿಚಾರಿಸಿದಾಗ ಅಧಿಕಾರಿಯೊಬ್ಬರಿಗೆ ಒಂದು ಮಂಚಕ್ಕಿರುವ ಸಾಮಾನೆಂದು ಹೇಳಿದ್ದಾರೆ. ಈ ಮೇಲಿನ ಅಧಿಕಾರಿಗಳ ಈ ದುರುಪಯೋಗವನ್ನು ಅರಮೇರಿ ಗ್ರಾಮದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆಯು ಖಂಡಿಸುತ್ತದೆ. ಈ ಬಗ್ಗೆ ಮೇಲಿನಾಧಿಕಾರಿಗಳು ಕ್ರಮ ತೆಗೆದುಕೊಂಡು ಈ ಬಡ ಹರಿಜನ ಕುಟುಂಬಗಳಿಗೆ ಸೌಲಭ್ಯಗಳನ್ನು ಒದಗಿಸಬೇಕೆಂದು ಸಿ. ಪಿ. ಐ. (ಎಂ) ಅರಮೇರಿ ಶಾಖೆಯ ಕಾರ್ಯದರ್ಶಿ ಕಾಂ. ಎಂ.ಎ.ಬಾಮಿಚ್ಚಿ ಒತ್ತಾಯಿಸಿದ್ದಾರೆ.

●

ಫೋನ್ ಅಧಿಕಾರಿಗಳಿಂದ ತಪ್ಪೊಪ್ಪಿಗೆ

"ಅಂಕುಶ" ಪತ್ರಿಕೆಯ ಟೆಲಿಫೋನಿನ ಬಿಲ್ಲಿನ ಹಣವನ್ನು ನಿಯಮಿತ ಅವಧಿಯಲ್ಲಿಯೇ ತುಂಬಿದ್ದರೂ ಕೂಡ ಟೆಲಿಫೋನ್ ಇಲಾಖೆಯವರು ಅದನ್ನು ಡಿಸ್‌ಕನೆಕ್ಟ್ ಮಾಡಿದ್ದರು. ಅದಕ್ಕಾಗಿ ಶ್ರೀ ಚಂದ್ರಶೇಖರ ಗು. ಹುರಳಿ, ಅವರು ಸಂಬಂಧಪಟ್ಟ ಹಾಗೂ ಅವರ ವರಿಷ್ಠ ಅಧಿಕಾರಿಗಳಿಗೆ ಫೋನ್ ಡಿಸ್‌ಕನೆಕ್ಟ್ ಆದ ಬಗ್ಗೆ ತಮಗೆ ಅತೀವ ಮಾನಸಿಕ ನೋವು ಆದ ಬಗ್ಗೆ ಹಾಗೂ ಸಾರ್ವಜನಿಕರಲ್ಲಿ ತಮಗೆ ಅವಮಾನ ಆಗಿದೆ ಎಂದು ಮನವಿ ಮಾಡಿಕೊಂಡಿದ್ದರು. ಅದರಿಂದಲೂ ಸದರಿ ಅಧಿಕಾರಿಗಳು ಏನೂ ದಾದ್ ಮಾಡಲಿಲ್ಲ. ಆದ್ದರಿಂದ ಶ್ರೀ ಹುರಳಿ ಅವರು ತಮ್ಮ ಮಾನಸಿಕ ತ್ರಾಸು ಹಾಗೂ ತಮಗಾದ ಅಪಮಾನದ ಬಗ್ಗೆ ಧಾರವಾಡ ಮುನ್ಸಿಫ್ ಕೋರ್ಟಿನಲ್ಲಿ ಫೋನ್ ಅಧಿಕಾರಿ ಹಾಗೂ ಅದಕ್ಕೆ ಸಂಬಂಧಪಟ್ಟ ಇತರರ ಮೇಲೆ ಲುಕಸಾನ ದಾವಾ ಮಾಡಿದ್ದರು.

ಈ ದಾವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೋರ್ಟಿನಲ್ಲಿ ಹಾಜರ್ ಆಗಿ ಶ್ರೀ ಚಂದ್ರಶೇಖರ ಹುರಳಿ ಅವರ ಫೋನನ್ನು ಆಕಸ್ಮಿಕವಾಗಿ ಡಿಸ್‌ಕನೆಕ್ಟ್ ಮಾಡಲಾಗಿತ್ತು. ಮತ್ತು ಡಿಸ್‌ಕನೆಕ್ಟ್ ಮಾಡಿದ ಬಗ್ಗೆ ಲಿಖಿತ ರೂಪದಲ್ಲಿ ಬರೆದುಕೊಟ್ಟು ವಿಷಾದ ವ್ಯಕ್ತಪಡಿಸಿದ್ದಾರೆ. ಫೋನ್ ಅಧಿಕಾರಿಗಳಿಗೆ ಆದ ಪಶ್ಚಾತ್ತಾಪವನ್ನು ನೋಡಿ ಮತ್ತು ಫೋನ್ ಅಧಿಕಾರಿಗಳು ಲಿಖಿತ ರೂಪದಲ್ಲಿ ವಿಷಾದ ವ್ಯಕ್ತಪಡಿಸಿದ್ದನ್ನು ಮನ್ನಿಸಿದ ಶ್ರೀ ಹುರಳಿ ಅವರು ಕೋರ್ಟಿನಲ್ಲಿ ಈ ಅಧಿಕಾರಿಗಳ ಮೇಲೆ ಹಾಕಿದ್ದ ದಾವೆಯನ್ನು ವಾಪಸ್ ತೆಗೆದುಕೊಂಡರು. ಈ ದಾವಾ ಪ್ರಿನ್ಸಿಪಲ್ ಮುನ್ಸಿಫ್ ಶ್ರೀ ಎಂ. ಟಿ. ಗುಡಜಣ್ಣವರ ಇವರ ಎದುರು ನಡೆದಿತ್ತು. ಹೆಸರಾಂತ ವಕೀಲರೂ, "ಅಂಕುಶ" ಪತ್ರಿಕೆಯ ಕಾನೂನು ಸಲಹೆಗಾರರೂ ಆದ ಶ್ರೀ ಎಚ್. ಬಿ. ಮೊಖಾನೆ ಹಾಗೂ ಶ್ರೀ ವಿಕ್ರಮ ಪಾಟೀಲರು ಶ್ರೀ ಹುರಳಿ ಅವರ ಪರವಾಗಿ ವಕಾಲತ್ತು ವಹಿಸಿದ್ದರು.

○

ಮುಷ್ಕರವಲ್ಲ, ಬೀಗಮುದ್ರೆ

ದ. ಕ. ಜಿಲ್ಲೆ, ಕುಂದಾಪುರ ಹೆಂಚಿನ ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ನಮಗೆ ಆಶ್ಚರ್ಯವಾಗಿದೆಯೆಂದು 'ಸೌತ್ ಕೆನರಾ ಟ್ರೈಲ್ ವರ್ಕರ್ಸ್ ಯೂನಿಯನ್'ನ ಪ್ರಧಾನ ಕಾರ್ಯದರ್ಶಿ ಕಾಂ. ಕೊರಗಪ್ಪ ರೈಯವರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಸುದ್ದಿಯು ವಾಸ್ತವಿಕತೆಯಿಂದ ದೂರವಾಗಿದೆ. ಹನ್ನೆರಡು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಎರಡು ಸಾವಿರ ಕಾರ್ಮಿಕರು ತಮ್ಮ ಸಂಘದ ಸದಸ್ಯರಾಗಿದ್ದು ಕಾರ್ಮಿಕರು ದಿನಕ್ಕೆ ಕೇವಲ ರೂ. 5 ಸರಾಸರಿ ಪಡೆಯುತ್ತಾರೆ. ಕಾರ್ಮಿಕರು ಮತ್ತು ಮಾಲೀಕರ ನಡುವೆ ಆದ ಒಪ್ಪಂದ ತಾ. 31-12-79ಕ್ಕೆ ಮುಗಿದಿದೆ, ಹಳೆಯ ಒಪ್ಪಂದದ ವಿಧಿಯನ್ವಯ ಹೊಸ ಒಪ್ಪಂದದ ಸೂತ್ರಗಳನ್ನು ಒಪ್ಪಂದದ ಅವಧಿ ಮುಗಿಯುವ ಆರು ತಿಂಗಳು ಮೊದಲೇ ಮಾಲೀಕರಿಗೆ ಕಳಿಸಬೇಕಾಗುತ್ತೆ. ಅದರಂತೆ ಸದ್ಯದ ವೇತನದಲ್ಲಿ ರೂ. 3 ರಂತೆ ಹೆಚ್ಚಳ, ಜೀವನ ಸೂಚ್ಯಂಕದ ಒಂದು ಪಾಯಿಂಟಿಗೆ ಹತ್ತು ಪೈಸೆ ಹಾಗೂ ಶೇ. 25 ರಷ್ಟು ಬೋನಸ್ ಬೇಡಿಕೆಗಳನ್ನಿಟ್ಟು ಕಾರ್ಮಿಕ ಸಂಘ ಬೇಡಿಕೆಗಳನ್ನು ಮುಂದಿಟ್ಟಿತು.

ಹೆಂಚಿನ ಕಾರ್ಖಾನೆಗಳು ಒಳ್ಳೆಯ ಲಾಭವನ್ನು ಮಾಡುತ್ತಿವೆ. ಹೆಂಚಿನ ಬೆಲೆ ರೂ. 400 ರಿಂದ ರೂ. 800 ಕ್ಕೆ ಏರಿದೆ. ಅದೇ ವೇಳೆ ಕಾರ್ಮಿಕರ ಆರ್ಥಿಕ ಪರಿಸ್ಥಿತಿ ದಿನೇ ದಿನೇ ಕೆಡುತ್ತಿದ್ದು, ಜೀವನ ನಡೆಸುವುದೇ ಕಷ್ಟವಾಗಿದೆ.

ಮಾತುಕತೆಗಳನ್ನು ಪ್ರಾರಂಭಿಸಿದ ಕಾರ್ಮಿಕ ಮುಖಂಡರು, ಆಡಳಿತ ವರ್ಗದ ಹಟಮಾರಿತನದಿಂದಾಗಿ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಲಿಲ್ಲ. ಕಾರ್ಮಿಕರು ತಮ್ಮ ದಿನನಿತ್ಯದ ನಿರ್ದಿಷ್ಟ ಕೆಲಸವನ್ನು ಮಾತ್ರ ಮಾಡತೊಡಗಿದರು. 'ನಿಧಾನ ಕೆಲಸ'ದ ಯುಕ್ತಿಯನ್ನು ಮಾಡದೆ. ಮಾಲೀಕರು ಹೇಳಿದ ಹೆಚ್ಚುವರಿ ಕೆಲಸವನ್ನು ಮಾತ್ರ ನಿರಾಕರಿಸಿದರು. ಇದರಿಂದ ಸಿಟ್ಟಿಗೆದ್ದ ಮಾಲೀಕರು ಕಾರ್ಮಿಕರನ್ನು ದಾರಿಗೆ ತರಲು ಅಘೋಷಿತ ಬೀಗಮುದ್ರೆ ಹಾಕಿದ್ದಾರೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆಂದು ಪ್ರಚಾರ ಮಾಡುತ್ತಿದ್ದಾರೆ.

ಆಡಳಿತ ವರ್ಗದವರು ತಮ್ಮ ಈ ಕುಯುಕ್ತಿಗಳನ್ನು ಕೈಬಿಟ್ಟು, ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ, ಎಲ್ಲಾ ಕಾರ್ಮಿಕರಿಗೆ ಕೆಲಸ ಸಿಗುವಂತೆ ಬೀಗಮುದ್ರೆ (ಲಾಕೌಟ್) ತೆಗೆಯಬೇಕೆಂದು ಪ್ರಧಾನ ಕಾರ್ಯದರ್ಶಿಗಳು ಒತ್ತಾಯಪಡಿಸಿದ್ದಾರೆ.

●

ಮೀನ ಎಸ್ಟೇಟ್ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿರುವ ಮೀನ ಎಸ್ಟೇಟ್ ಕಾರ್ಮಿಕರು ಸಂಬಳದ ಹೆಚ್ಚಳ, ತೋಟ ಕಾರ್ಮಿಕರ ಕಾನೂನಿನಲ್ಲಿರುವ ಸೌಲಭ್ಯಗಳ ಲಭ್ಯ ಮೊದಲಾದ ನ್ಯಾಯ ಸಮ್ಮತವಾದ ಬೇಡಿಕೆಗಳಿಗಾಗಿ ತಾ 12-1-1980 ರಿಂದ ಮುಷ್ಕರ ನಡೆಸುತ್ತಿದ್ದಾರೆ.

ಕಾರ್ಮಿಕರ ಬೇಡಿಕೆಗಳು ಮತ್ತು ಮುಷ್ಕರಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಮಲೆನಾಡು ಪ್ರಾದೇಶಿಕ ಸಮಿತಿಯು ಸಂಪೂರ್ಣ ಬೆಂಬಲವನ್ನು ಕೊಡುತ್ತದೆ. ಈ ಮುಷ್ಕರಕ್ಕೆ ಎಲ್ಲಾ ದುಡಿಯುವ ಜನರೂ ಪ್ರಗತಿಶೀಲ ಶಕ್ತಿ ಮತ್ತು ವ್ಯಕ್ತಿಗಳೂ ಬೆಂಬಲ ಕೊಟ್ಟು ಈ ಕಾರ್ಮಿಕರ ಬೇಡಿಕೆಗಳನ್ನು ಬೇಗ ಈಡೇರಿಸುವಂತೆ ಮೀನ ಎಸ್ಟೇಟ್ ಮಾಲೀಕರನ್ನು ಒತ್ತಾಯಪಡಿಸಬೇಕೆಂದು ಸಮಿತಿಯು ವಿನಂತಿಸುತ್ತದೆ.

○

ಪಿ. ಡಬ್ಲ್ಯೂ. ಡಿ. ಕೆಲಸಗಾರರ ಸಭೆ, ಮೆರವಣಿಗೆ

ತುಮಕೂರು ಜಿಲ್ಲೆಯ ಪಿ. ಡಬ್ಲ್ಯೂ. ಡಿ. ಕೆಲಸಗಾರರು ಮೊದಲ ಬಾರಿಗೆ ಎಲ್ಲಾ ತಾಲ್ಲೂಕುಗಳಿಂದ ಆಗಮಿಸಿ, ಕೆಲಸ ಖಾಯಂಗೊಳಿಸುವುದು, ಭಾನುವಾರ ಮತ್ತಿತರ ಹಬ್ಬದ ರಜಾ ದಿನಗಳನ್ನು ಸಂಬಳ ಸಹಿತ ಮಂಜೂರು ಮಾಡುವುದು, ಸಮವಸ್ತ್ರ, ಸೈಕಲ್ ಭತ್ಯ, ಮನೆ ಭತ್ಯ, ಬಟ್ಟೆ ಒಗೆಯಲು ಭತ್ಯ ಮುಂತಾದ ಬೇಡಿಕೆಗಳನ್ನು ಇಟ್ಟು ತಾ॥ 11-2-80 ರಂದು ಕೆಂಬಾವುಟಗಳನ್ನು ಹಿಡಿದು ಮೆರವಣಿಗೆ ನಡೆಸಿದರು. ಕೆಲಸಗಾರರಿಗೆ ತಿಂಗಳಿಗೆ ರೂ. 300/-, ಮೇಸ್ತ್ರಿಗೆ ರೂ. 400/-ರಂತೆ ಸಂಬಳ ಕೊಡಬೇಕು, ಪ್ರತಿ ತಿಂಗಳೂ ತಾ॥ 5ರ ಒಳಗಾಗಿ ಸಂಬಳ ಸಿಗಬೇಕು, ಬೆಳಗಾಂ ಪಿ. ಡಬ್ಲ್ಯೂ. ಡಿ. ಕೆಲಸಗಾರರ ಬಗ್ಗೆ ಅಡಿಷನಲ್ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ನೀಡಿರುವ ತೀರ್ಪು ಜಾರಿಯಾಗಬೇಕು ಎಂಬ ಮುಖ್ಯ ಬೇಡಿಕೆಗಳನ್ನು ಮುಂದಿಟ್ಟ ಮನವಿ ಪತ್ರಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ಸಲ್ಲಿಸಲಾಯಿತು.

ಬಳಿಕ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿ. ಪಿ. ಐ. ನ ರೇವಣ್ಣ, ಶಿವಣ್ಣ ಹಾಗೂ ಶಿವನಂಜಪ್ಪನವರು ಮಾತನಾಡಿದರು. ಸಿ.ಪಿ.ಐ(ಎಂ)ನ ಪರವಾಗಿ ಗುಬ್ಬಿ ಮತ್ತು ತಿಪಟೂರು ಸಬ್ ಡಿವಿಜನ್ ಪಿ.ಡಬ್ಲ್ಯೂ.ಡಿ. ಕೆಲಸಗಾರರ ಮುಖಂಡರಾದ ಹೆಚ್. ಸಿ. ಚೆನ್ನಪ್ಪ ಮತ್ತು ದಯಾಮಯ ಮಾತನಾಡಿದರು. ರೈತ ಸಂಘದ ಪರವಾಗಿ ಆರ್. ಎಸ್. ಚೆನ್ನಬಸವಣ್ಣ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಸಭೆ, ಮೆರವಣಿಗೆ ಮುಂತಾದ ಕಾರ್ಯಕ್ರಮಗಳ ಬಗ್ಗೆ ಸಿ ಪಿ ಐ. ನವರು ಸಿ. ಪಿ. ಐ (ಎಂ) ನೊಂದಿಗೆ ಮೊದಲೇ ಸಮಾಲೋಚನೆ ನಡೆಸದೆ, ಸಹಕಾರವಿಲ್ಲದೆ ಕಾರ್ಯಕ್ರಮ ಹಾಕಿದ್ದರೂ ಕಾರ್ಮಿಕ ವರ್ಗದ ಮಧ್ಯೆ ಐಕ್ಯತೆಯನ್ನು ಬೆಳೆಸುವ ದೃಷ್ಟಿಯಿಂದ ಸಿ.ಪಿ ಐ(ಎಂ) ಮುಖಂಡರು ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಶ್ರಮಿಸಿದರು.

○

ರೈತರ ಮೇಲೆ ಬಲಾತ್ಕಾರ : ಕೋಲಾರ ರೈತಸಂಘದ ಪ್ರತಿಭಟನೆ

ಕೋಲಾರ ಜಿಲ್ಲೆಯ ರೈತರ ವ್ಯವಸಾಯ ಸಲಕರಣೆಗಳನ್ನು, ಅವರ ಎತ್ತು ಎಮ್ಮೆಗಳನ್ನು ಹಾಗೂ ಪಂಪುಸೆಟ್ಟುಗಳನ್ನು ಬಲಾತ್ಕಾರವಾಗಿ ಸರ್ಕಾರ ಕಿತ್ತುಕೊಳ್ಳುತ್ತಿರುವುದರ ವಿರುದ್ಧ ಜಿಲ್ಲಾ ರೈತ ಸಂಘವು ಸಾರ್ವಜನಿಕ ಸಭೆಯೊಂದರಲ್ಲಿ ತನ್ನ ಪ್ರತಿಭಟನೆ ವ್ಯಕ್ತಪಡಿಸಿದೆ. ರೈತರ ಸಾಲ ಬಾಕಿಯನ್ನು ವಸೂಲಿ ಮಾಡಲು ಈ ರೀತಿಯ ಬಲಾತ್ಕಾರ ಕ್ರಮಗಳಿಗೆ ಸರ್ಕಾರ ಇಳಿದಿದೆ ಎಂದು ಸರ್ಕಾರವನ್ನು ಉಗ್ರವಾಗಿ ಖಂಡಿಸಿರುವ ರೈತ ಸಂಘದ ನಾಯಕರು, ಈ ದಮನಕಾರಿ ನೀತಿಯನ್ನು ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

ಬೆಲೆಗಳ ಏರಿಕೆಯ ವಿರುದ್ಧ ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸಿರುವ ರೈತ ಸಂಘವು ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಈ ತಿಂಗಳ 12ರಂದು ಮುಳಬಾಗಿಲಿನಲ್ಲಿ ನಡೆದ ಭಾರಿ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಜಿಲ್ಲೆಯ ಜನಪ್ರಿಯ ವಕೀಲ ಆರ್. ವೆಂಕಟರಾಮಯ್ಯ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕೋಲಾರದ ಕಾರ್ಮಿಕ ನಾಯಕ ಕಾ॥ ಅಬ್ದುಲ್ ಮಜೀದ್, ದಲಿತ ಸಂಘರ್ಷ ಸಮಿತಿಯ ನಾಯಕ ವಿಜಯಕುಮಾರ್, ಕೋಲಾರ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬಿ. ಕೃಷ್ಣಪ್ಪ, ಬಿ. ವಿ. ನಾಗಿರೆಡ್ಡಿ ಮತ್ತು ಎ. ವಿ. ಶ್ರೀನಿವಾಸಗೌಡ ಮಾತನಾಡಿದರು.

ರೈತರನ್ನು ಸಂಘಟಿಸಲು ನಿರ್ಧಾರ

ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕು ಗುಡದನಾಳ ಮತ್ತು ಮುದ್ಗಾಪುರದಲ್ಲಿ ತಾರೀಕು 10-2-80ರಂದು ಶ್ರೀ ಶಿವಶರಣಗೌಡ ತಾಲ್ಲೂಕು ಬೋರ್ಡು ಸದಸ್ಯ ಇವರ ಅಧ್ಯಕ್ಷತೆಯಲ್ಲಿ ಯುವಕರ ಸಭೆಗಳು ನಡೆದವು. ಸಭೆಯಲ್ಲಿ ತಾಲ್ಲೂಕಿನಾದ್ಯಂತ ರೈತ ಸಂಘಟನೆಯನ್ನು ಬೆಳೆಸುವ ಬಗ್ಗೆ ಚರ್ಚಿಸಲಾಯಿತು. ಕಾಂ. ನಾಗಪ್ಪ ಮುದ್ಗಟ್ ಮಾತನಾಡಿ ಹಳ್ಳಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಲು ರೈತ ಸಂಘಟನೆಗಳು ಅಗತ್ಯವೆಂದರು. ಕಾಂ. ಮೌಲಖಾನ್, ಕಾಂ. ನಾರಾಯಣ ಇವರು ಮಾತನಾಡಿ ಪ್ರತಿಯೊಂದು ಹಳ್ಳಿಯಲ್ಲೂ ರೈತಸಂಘಗಳು ಬೆಳೆದಾಗಲೇ ಶೋಷಣೆಯ ಕೊನೆ ಸಾಧ್ಯವೆಂದರು. ಕಾಂ. ಸಿ. ಎಂ. ಖುಸ್ರು ರೈತ ಸಂಘದ ಧ್ಯೇಯಧೋರಣೆಗಳನ್ನು ವಿವರಿಸಿದರು. ಶ್ರೀ ಶಿವಶರಣ ಗೌಡರು ರೈತರ ಸಮಸ್ಯೆಗಳನ್ನು ವಿವರಿಸಿ, ಕೂಡಲೇ ಕಾರ್ಯಕ್ರಮ ಹಾಕುವುದರ ಅವಶ್ಯಕತೆ ತಿಳಿಸಿದರು. ವಂದನಾರ್ಪಣೆಯೊಂದಿಗೆ ಸಭೆ ಮುಗಿಯಿತು.

●

ಭೂನ್ಯಾಯ ಮಂಡಳಿಗಳಲ್ಲಿ ರೈತಸಂಘಗಳ ಪ್ರತಿನಿಧಿಗಳನ್ನು ಸೇರಿಸಬೇಕು

ರೈತಸಂಘದ ದ. ಕ. ಜಿಲ್ಲಾ ಸಮಿತಿಯ ಸಭೆಯು ತಾ. 8-2-80 ರಂದು ಬೆಳ್ತಂಗಡಿಯ ಕೆ. ವಿ. ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಯದರ್ಶಿ ಯು. ಜನಾರ್ಧನ ನಾಯಕರು ಸ್ವಾಗತಿಸಿ ವರದಿ ಒಪ್ಪಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ ಕೆ. ಶಂಕರ, ಡೇವಿಡ್ ಕರ್ಕಡ, ಜೆ. ಕೃಷ್ಣಪ್ಪ, ಬಿ. ನಾರಾಯಣ, ಮೊದಲಾದವರು ಭಾಗವಹಿಸಿದರು.

ಭೂ ನ್ಯಾಯ ಮಂಡಳಿಗಳನ್ನು ರೈತ ಸಂಘದ ಪ್ರತಿನಿಧಿಗಳನ್ನು ಸೇರಿಸಿ ಪುನರ್ರಚಿಸಬೇಕೆಂದು ಮುಖ್ಯ ಮಂತ್ರಿಗಳನ್ನು ಒತ್ತಾಯಿಸಲಾಯಿತು.

ಐದು ಎಕ್ರೆಗಿಂತ ಕಡಿಮೆ ಭೂಮಿಯಿರುವ ರೈತರ ಭೂಕಂದಾಯ ರದ್ದುಗೊಳಿಸಬೇಕೆಂದು ಮತ್ತು ರೈತರ ಎಲ್ಲಾ ಸಾಲಗಳನ್ನು ಸೊಸೈಟಿ ಸಾಲಗಳನ್ನು ಸೇರಿಸಿ–ರದ್ದುಗೊಳಿಸುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಲಾಯಿತು.

ರೈತಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸವನ್ನು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ತೀವ್ರಗೊಳಿಸಬೇಕೆಂದು ನಿರ್ಣಯವಾಯಿತು.

ಜಿಲ್ಲಾ ರೈತರ ಸಮ್ಮೇಳನವನ್ನು ಏಪ್ರಿಲ್ ಕೊನೆಯವಾರದಲ್ಲಿ ಕುಂದಾಪುರದಲ್ಲಿ ಕರೆಯಬೇಕೆಂದು ನಿರ್ಣಯ ಮಾಡಲಾಯಿತು.

ರಾಜ್ಯ ರೈತ ಸಮಿತಿಯ ಕಾರ್ಯದರ್ಶಿ ಕಾಮ್ರೇಡ್ ಪಿ. ರಾಮಚಂದ್ರ ರಾಯರು ಮಾರ್ಗದರ್ಶನವಿತ್ತರು.

●

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಮೈಸೂರು: ಎಸ್.ಎಫ್.ಐ. ಸರ್ವಸದಸ್ಯರ ಸಭೆ

[2ನೇ ಪುಟದಿಂದ]

ಅಧ್ಯಕ್ಷ: ಶ್ರೀ ವೀರಭದ್ರಯ್ಯ, ಉಪಾಧ್ಯಕ್ಷ: ಎನ್. ಆರ್. ಬಾಳೇಕಾಯಿ, ಎನ್. ಕುಮಾರಸ್ವಾಮಿ, ಪ್ರಧಾನ ಕಾರ್ಯದರ್ಶಿ: ನರಸಿಂಹೇಗೌಡ, ಸಂಘಟನಾ ಕಾರ್ಯದರ್ಶಿ: ಬಿ. ಬಸವಲಿಂಗಪ್ಪ, ಸಹ ಕಾರ್ಯದರ್ಶಿಗಳು: ಎಂ. ಎನ್ ಅಶೋಕ ಕುಮಾರ್, ಕೆ. ಆರ್. ಪಾರ್ಥ, ಎಸ್. ರಾಜೇಂದ್ರಪ್ರಸಾದ್, ಬಸವಪ್ರಭು, ಖಜಾಂಚಿ: ಕೆ.ಎಲ್. ಸುರಭಿ.

ಕಾರ್ಯಕಾರಿ ಸಮಿತಿ ಸದಸ್ಯರು:

ಎಸ್. ಮಂಜಪ್ಪ, ಚಂದ್ರಶೇಖರ ಮೂರ್ತಿ, ಎನ್. ಸಂಜಯ, ಎಂ. ವಿ. ಸುರೇಶ, ಹೆಚ್. ಎನ್. ಜಗದೀಶ್, ಎಸ್. ಟಿ. ದಿನೇಶ್.

○

ಸಂಜೆ ಸಂಘದ ಅಧ್ಯಕ್ಷ ಎಂ. ಜಿ. ಕೃಷ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ರೈತ ಸಂಘದ ಕಾರ್ಯಕರ್ತರ ಸಭೆಸೇರಿ ಸಂಘದ ಚಟುವಟಿಕೆಗಳನ್ನು ವಿಸ್ತರಿಸಲು, ತಾಲ್ಲೋಕಿನಾದ್ಯಂತ ಸಭೆಗಳನ್ನು ಜರುಗಿಸಲು ನಿರ್ಧರಿಸಲಾಯಿತು.

●

...ಸಮರ್ ಮುಖರ್ಜಿ ಕರೆ

[1ನೇ ಪುಟದಿಂದ]

ಹಾಗೂ ಇತರೆ ಪ್ರಜಾಪ್ರಭುತ್ವ ಶಕ್ತಿಗಳನ್ನು ಶಕ್ತಗೊಳಿಸಬೇಕೆಂದು ಸಮರ್ ಮುಖರ್ಜಿ ಮನವಿ ಮಾಡಿದರು.

ಹೋಟೆಲ್ ಕಾರ್ಮಿಕರ ಹೋರಾಟ

ತಮ್ಮನ್ನು ವಿನಾಕಾರಣ ಕೆಲಸದಿಂದ ತೆಗೆದುಹಾಕುತ್ತಿರುವುದರ ವಿರುದ್ಧ ಕಳೆದ ಕೆಲವು ದಿನಗಳಿಂದ ಬೆಂಗಳೂರು ನಗರದಲ್ಲಿ ಪಂಜಿನ ಮೆರವಣಿಗೆ ನಡೆಸುತ್ತಿರುವ ಹೋಟೆಲ್ ಕಾರ್ಮಿಕರು ಸಮರ್ ಮುಖರ್ಜಿ ಭಾಷಣ ಮಾಡಿದ ಸಭೆಗೆ ಪಂಜಿನ ಮೆರವಣಿಗೆಯಲ್ಲಿ ಬಂದರು. "ನಮ್ಮ ಹೋರಾಟಕ್ಕೆ ಜಯವಾಗಲಿ" ಸಿ.ಪಿ.ಐ(ಎಂ) ಜಿಂದಾಬಾದ್, ಸಿ.ಐ.ಟಿ.ಯು ಜಿಂದಾಬಾದ್, ಸಮರ್ ಮುಖರ್ಜಿ ಜಿಂದಾಬಾದ್ ಎಂದು ಘೋಷಣೆಗಳನ್ನು ಕೂಗುತ್ತಿದ್ದ ಹೋಟೆಲ್ ಕಾರ್ಮಿಕರ ಬಳಿಗೇ ಧಾವಿಸಿ ಬಂದ ಸಿ.ಪಿ.ಐ (ಎಂ) ನಾಯಕ ಸಮರ್ ಮುಖರ್ಜಿ ನಿಮ್ಮ ಹೋರಾಟದೊಂದಿಗೆ ನಾನಿದ್ದೇನೆ- ನಿಮ್ಮೆಲ್ಲ ಬೇಡಿಕೆಗಳಿಗೆ ನನ್ನ ಬೆಂಬಲವಿದೆ ಎಂದು ಘೋಷಿಸಿದರು. ಮುಂಬರುವ ದಿವಸಗಳು ಹೋರಾಟದ ದಿವಸಗಳಂತಲೂ ಆ ಹೋರಾಟದಲ್ಲಿ ನೀವೆಲ್ಲ ಸಂಘಟಿತರಾಗಿ ಹೋರಾಡಿದರೆ ಭವಿಷ್ಯ ನಿಮ್ಮದೆಂದು ಹೋಟೆಲ್ ಕಾರ್ಮಿಕರಿಗೆ ಮಾರ್ಕ್ಸ್‌ವಾದಿ ನಾಯಕರು ಧೈರ್ಯ ತುಂಬಿದರು.

ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯ ಟಿ. ಎಸ್. ಅನಂತರಾಮು ಸ್ವಾಗತಿಸಿದರು. ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಂ. ಆರ್. ಶ್ರೀನಿವಾಸ್ ವಂದಿಸಿದರು.

●

ಪುರಸಭೆಯಲ್ಲಿ ಪ್ರತಿಭಟನೆ, ಸಭಾತ್ಯಾಗ

ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಮುನ್ಸಿಪಲ್ ಕೌನ್ಸಿಲ್ ಸಭೆ ತಾ॥24-1-80ರಂದು ನಡೆದಾಗ ಊರಿನಲ್ಲಿ ನೀರು ತೆರಿಗೆಯನ್ನು ಹೆಚ್ಚಿಸಬೇಕೆಂದು ಆಡಳಿತ ಪಕ್ಷದವರು ತಂದ ಸೂಚನೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಲಕ್ಷ್ಮಯ್ಯ ಮತ್ತಿತರರು ಉಗ್ರವಾಗಿ ಪ್ರತಿಭಟಿಸಿದರಿಂದ ಸೂಚನೆಯನ್ನು ವಾಪಸು ಪಡೆಯಲಾಯಿತು.

ಬಡವರು ಮನೆ ಕಟ್ಟಿಕೊಳ್ಳಲು, ರಿಪೇರಿ ಮಾಡಲು ಸರಕಾರ ಹೋದ ವರ್ಷವೇ ಸಾಲವನ್ನು ರೂ 2000/- ದಿಂದ ರೂ4000/-ಕ್ಕೆ ಏರಿಸಿದ್ದರೂ, ವಿಷಯವನ್ನು ಸಾರ್ವಜನಿಕರಿಗೆ ತಿಳಿಸದೆ ತಮಗೆ ಬೇಕಾದವರು, ಬಡವರಲ್ಲದವರಿಗೆ ಕೆಲವರಿಗೆ ಮಾತ್ರ ಸಾಲ ಮಂಜೂರು ಮಾಡಿರುವುದನ್ನು ವಿರೋಧ ಪಕ್ಷದವರು ಟೀಕಿಸಲಾರಂಭಿಸಿದಾಗ ಆಡಳಿತ ಗುಂಪಿನ ಕೆ ಆರ್. ಶ್ರೀನಿವಾಸನ್ "ನಾವು ಬಹುಮತದವರು ಇಷ್ಟ ಬಂದ ಹಾಗೆ ಮಾಡುತ್ತೇವೆ" ಎಂದು ಹೇಳಿದ್ದನ್ನು ವಿರೋಧಿಸಿ ಕಾಂ. ಲಕ್ಷ್ಮಯ್ಯ ಹಾಗೂ ಇತರರು ಸಭಾತ್ಯಾಗ ಮಾಡಿ ಹೊರಬಂದರು.

ಚಿಕ್ಕಬಳ್ಳಾಪುರದ ವಸತಿಹೀನ ಹತ್ತು ಸಾವಿರ ರೈತ, ಕಾರ್ಮಿಕರು, ಗುಡಿಸಲುವಾಸಿಗಳು ಪುರಸಭೆಯ ವರ್ತನೆಯ ವಿರುದ್ಧ ಹೋರಾಡಲು ನಿರ್ಧರಿಸಿದ್ದಾರೆಂದು ಕಾಂ. ಲಕ್ಷ್ಮಯ್ಯ ತಿಳಿಸಿದ್ದಾರೆ.

●

ಸಂಪಾದಕೀಯ

[1ನೇ ಪುಟದಿಂದ]

ಹಾವಳಿಯಿಂದ ಕನ್ನಡಿಗರಿಗೂ ಇತರರಿಗೂ ಆದ ಹಾನಿಯನ್ನು ನಾವು ಮರೆಯಲು ಸಾಧ್ಯವಿಲ್ಲ. ಅಸ್ಸಾಂನಲ್ಲಿ ನಡೆಯುತ್ತಿರುವ ಚಳುವಳಿಯಿಂದ ದೇಶಕ್ಕಾಗುತ್ತಿರುವ ನಷ್ಟವನ್ನು ನಾವು ನೋಡುತ್ತಿದ್ದೇವೆ. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ಹೆಚ್ಚಬೇಕೆಂದು ನಾವು ಹೋರಾಡುವಾಗ ನಾವೆಲ್ಲಾ ಭಾರತೀಯರೆಂಬುದನ್ನು ನೆನಪಿನಲ್ಲಿಡುವುದಗತ್ಯ. "ನೆಲದ ಮಕ್ಕಳು" ಎಂಬ ವಾದವನ್ನು ಹೂಡುವಾಗ ಎಚ್ಚರಿಕೆ ವಹಿಸುವುದಗತ್ಯ.

ಈಗಿನ ಸಮಾಜ ವ್ಯವಸ್ಥೆಯಲ್ಲಿ ಬಿಕ್ಕಟ್ಟು ದಿನೇ ದಿನೇ ತೀವ್ರವಾಗುತ್ತಿರುವಾಗ ನಿರುದ್ಯೋಗ ಬೆಳೆಯುತ್ತಿರುತ್ತದೆ. ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವುದೇ ಇದಕ್ಕೆ ಪರಿಹಾರವಲ್ಲದೆ ಇತರ ಮಾರ್ಗವಿಲ್ಲ. ಸಮಾಜವಾದಿ ರಾಷ್ಟ್ರಗಳಲ್ಲಿ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಶ್ರೀ ಗುಂಡೂರಾಯರ ಹೇಳಿಕೆಗಳನ್ನು ಕೇರಳ ಮುಖ್ಯಮಂತ್ರಿಯವರೂ, ತಮಿಳುನಾಡಿನ ಮುಖ್ಯಮಂತ್ರಿಗಳೂ ಪ್ರತಿಭಟಿಸಿದ್ದಾರೆ. ಆದ್ದರಿಂದ ಇಂಥಹ ಪ್ರಶ್ನೆಗಳ ಬಗ್ಗೆ ನಮ್ಮ ಮುಖ್ಯಮಂತ್ರಿಯವರು ಕನ್ನಡನಾಡಿನ ಮತ್ತು ಜನತೆಯ ಹಿತರಕ್ಷಣೆ ಮಾಡಲು ಸ್ವಲ್ಪ ಎಚ್ಚರಿಕೆಯಿಂದ ವರ್ತಿಸಬೇಕೆಂದು ಅಭಿಪ್ರಾಯ ಪಡುತ್ತೇವೆ. ಇಲ್ಲದಿದ್ದರೆ, ಜನತೆಯ ಮುಂದಿರುವ ಹಲವಾರು ಸಮಸ್ಯೆಗಳನ್ನು ಬಗೆಹರಿಸುವ ಬದಲು, ಅವರ ಪಕ್ಷದೊಳಗಿನ ಅಂತರಿಕ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆ ಕಡೆಗೆ ಸೆಳೆಯುವ ಅವರ ಪ್ರಯತ್ನವೆಂದು ಇತರರು ಹೇಳಲು ಅವಕಾಶವಿದೆ.

ಕನ್ನಡಿಗರ ಎಲ್ಲ ನ್ಯಾಯವಾದ ಬೇಡಿಕೆಗಳಿಗೆ, ಎಲ್ಲ ಹೋರಾಟಗಳಿಗೂ ನಮ್ಮ ಪಾರ್ಟಿಯು ಸಿದ್ಧವಿದೆಂದು ಸಾರುತ್ತಾ ಕರ್ನಾಟಕದ ಮುಖ್ಯಮಂತ್ರಿಯವರು ಇಂದಿರಾ ಕಾಂಗ್ರೆಸ್ ಪಕ್ಷದವರೆಂಬುದನ್ನು ನಾವು ಗಮನದಲ್ಲಿಡುವುದಗತ್ಯ ಮತ್ತು ಅವರ ಈ ವಾದಕ್ಕೆ ಅವರ ಪಕ್ಷದ ಬೆಂಬಲವಿದೆಯೇ ಎಂಬುದೂ ತಿಳಿಯದು. ಕಾಂಗ್ರೆಸ್‌ನವರಿಂದ ಈ ತೆರದ ಘೋಷಣೆಗಳನ್ನು ನಾವು ಹಿಂದಿನಿಂದಲೂ ಕೇಳಿ ಅಭ್ಯಾಸವಾಗಿದೆ. ಈಗಿನ ಮುಖ್ಯಮಂತ್ರಿಯವರೂ ಜನರನ್ನು ವಂಚಿಸುವ ಹಿಂದಿನ ದಾರಿಯಲ್ಲೇ ಮುಂದುವರಿದಿರುವುದರಲ್ಲಿ ಆಶ್ಚರ್ಯವಿಲ್ಲ. ಇದರಿಂದ ಕನ್ನಡಿಗರ ಸಮಸ್ಯೆಗಳು ಪರಿಹಾರವಾಗಲು ಸಾಧ್ಯವಿಲ್ಲವೆಂಬ ಎಚ್ಚರಿಕೆಯನ್ನು ಕೊಡುವುದು ನಮ್ಮ ಕರ್ತವ್ಯವಾಗಿದೆ.

●

ಧರಣಿ ಸತ್ಯಾಗ್ರಹ ಮತ್ತು ಬಹಿರಂಗ ಸಭೆ

ತಾ.9-2-80ರಂದು ಕೋಲಾರ ಜಿಲ್ಲಾ ಚಿಕ್ಕಬಳ್ಳಾಪುರದ ಪುರಸಭೆಯ ಮುಂಭಾಗದಲ್ಲಿ ಕೃಷಿಕಾರ್ಮಿಕರು, ರೇಷ್ಮೆ ಕೆಲಸಗಾರರು, ಹರಿಜನರು, ಬಡವರು, ದುರ್ಬಲವರ್ಗದವರು, ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಇದಕ್ಕೆ ಮುಂಚೆ ಭಾರಿ ಮೆರವಣಿಗೆಯನ್ನು ಊರಿನ ಮುಖ್ಯ ಬೀದಿಗಳಲ್ಲಿ ನಡೆಸಿ "ಬಡವರಿಗೆ ಉಚಿತ ನಿವೇಶನಗಳನ್ನು ಹಂಚಿ", "ಮನೆಗಳನ್ನು ಕಟ್ಟಿಕೊಳ್ಳಲು ಸಾಲಗಳನ್ನು ಹಂಚಿ" "ಬಡ ಮಕ್ಕಳಿಗೆ ಕೊಡುತ್ತಿರುವ ಹಾಲು ಬ್ರೆಡ್ ದುರುಪಯೋಗವಾಗಕೂಡದು" ಎಂಬ ಘೋಷಣೆಗಳು ಕೇಳಿಬಂದವು. ಮೆರವಣಿಗೆಯ ನಾಯಕತ್ವವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ನಾಯಕರಾದ ಕಾಂ. ಎಸ್. ಲಕ್ಷ್ಮಯ್ಯ, ವಿ. ರಾಮಯ್ಯ, ಕಾಂತರಾಜು, ನಂಜಮ್ಮ, ಶಾಯಮ್ಮ, ಚಿನ್ನಮ್ಮ, ಅಶ್ವತ್ಥಪ್ಪನವರು ವಹಿಸಿದ್ದರು. ಧರಣಿ ಸತ್ಯಾಗ್ರಹ ಮುಗಿದ ಮೇಲೆ 5 ಘಂಟೆಗೆ ಬಹಿರಂಗ ಸಭೆ ನಡೆದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪುರಸಭಾ ಸದಸ್ಯರಾದ ಕಾಂ. ಎಸ್. ಲಕ್ಷ್ಮಯ್ಯನವರು ಭಾಷಣ ಮಾಡುತ್ತಾ ಮುನಿಸಿಪಲ್ ಕಾಲೇಜಿನ ಡೊನೇಷನ್ ಹಣ ಏನಾಗಿದೆ ಎಂದು ಪ್ರಶ್ನಿಸಿದರಲ್ಲದೆ ಸರ್ಕಾರದಿಂದ ಕೊಟ್ಟಿರುವ ಸಹಾಯಧನ ಹಣವು ಬಡವರಿಗೆ ಮನೆಗಳನ್ನು ಕಟ್ಟಲು, ರಿಪೇರಿಮಾಡಲು ಕೊಡದೆ ನಿಧಾನ ಪ್ರವೃತ್ತಿ ಮಾಡುತ್ತಿರುವುದನ್ನು ಖಂಡಿಸಿದರು. ಬಡವರಿಗೆ ಖಾಲಿ ನಿವೇಶನಗಳನ್ನು ಹಂಚದೇ ಹೋದರೆ ಈಗ ಇದಕ್ಕಾಗಿ ಇಟ್ಟಿರುವ ಮುನಿಸಿಪಲ್ ನಿವೇಶನದಲ್ಲಿ ದುರ್ಬಲವರ್ಗದವರನ್ನು ಸಂಘಟಿಸಿ ಇನ್ನು ಒಂದು ತಿಂಗಳಲ್ಲಿ ಗುಡಿಸಲುಗಳನ್ನು ಹಾಕಿಸುವುದಾಗಿ ಘೋಷಿಸಿದರು. ಕಾಂತರಾಜ್ ವಂದಿಸಿದರು.

●

ಹೋಟೆಲ್ ಕಾರ್ಮಿಕರ ಆಕ್ರಮ ವಜಾ - ಪ್ರತಿಭಟನೆ

ಬೆಂಗಳೂರು ನಗರ ಯಶವಂತಪುರ 'ಹೋಟೆಲ್ ಕಿನೋ' ಮಾಲೀಕರು ಕಾರ್ಮಿಕರಿಗೆ ದಿನಕ್ಕೆ ಎಂಟು ಗಂಟೆ ಕೆಲಸ, ವಾರದ ರಜಾದಿನ ನಿರಾಕರಿಸಿದ್ದಲ್ಲದೆ, ಸಣ್ಣ, ಪುಟ್ಟ ವಿಷಯಗಳಿಗೆಲ್ಲಾ ಕೆಲಸಗಾರರ ಮೇಲೆ ಗೂಂಡಾಗಿರಿ ನಡೆಸುವುದನ್ನು ಪ್ರತಿಭಟಿಸಿ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರು ತಾ. 12-2-80ರಂದು ರಾತ್ರಿ 8 ಗಂಟೆಗೆ ಪಂಜಿನ ಮೆರವಣಿಗೆ ನಡೆಸಿದರು. ಮೆರವಣಿಗೆಯ ನಾಯಕತ್ವವನ್ನು ಕಾಂ. ಇ. ಕೆ. ಎನ್. ರಾಜನ್ ವಹಿಸಿದ್ದರು. ಹೋಟೆಲ್ ಮುಂಭಾಗದಲ್ಲಿ ನಡೆದ ಕಾರ್ಮಿಕರ ಸಭೆಯನ್ನು ಉದ್ದೇಶಿಸಿ ಕಾಂ. ಅಯ್ಯಪ್ಪನವರು ಮಾತನಾಡಿದರು.

* * *

"ಹೋಟೆಲ್ ಗ್ರಾಂಡ್ ನ್ಯಾಷನಲ್" ಮಾಲೀಕರು ಹನ್ನೆರಡು ಜನ ಕಾರ್ಮಿಕರನ್ನು ಅಕ್ರಮವಾಗಿ ವಜಾ ಮಾಡಿದ್ದನ್ನು ಪ್ರತಿಭಟಿಸಿ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಆಶ್ರಯದಲ್ಲಿ ತಾ. 13-2-80 ರಂದು ರಾತ್ರಿ 9 ಗಂಟೆಗೆ ಪಂಜಿನ ಮೆರವಣಿಗೆ ನಡೆಸಲಾಯಿತು. ಕಾಂ. ರಾಜನ್ ನೇತೃತ್ವದಲ್ಲಿ ಮೆರವಣಿಗೆ ನಗರದಲ್ಲಿ ಸುತ್ತಾಡಿ ದೇವಲ ಮಹರ್ಷಿ ಕಲ್ಯಾಣ ಮಂಟಪ ತಲುಪಿತು. ಕಾಂ. ಸಮರ ಮುಖರ್ಜಿಯವರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು.

○

ಸಂಸತ್ತಿನಲ್ಲಿ ಸಂಜಯನ 'ರಚನಾತ್ಮಕ' ಕೆಲಸ!

ತನ್ನ ಹಲವಾರು ವಿಶಿಷ್ಟ ಕೆಲಸಗಳಿಗಾಗಿ ರಾಷ್ಟ್ರದ ಗಮನವನ್ನು ಸೆಳೆದಿರುವ ಯುವಕ ಕಾಂಗ್ರೆಸ್ (ಐ) ನಾಯಕ ಹಾಗೂ ಪ್ರಧಾನಿ ಇಂದಿರಾಗಾಂಧಿಯವರ ಪುತ್ರ ಶ್ರೀ ಸಂಜಯ್‌ಗಾಂಧಿಯವರು ಈಗ ಲೋಕಸಭೆಯ ಸದಸ್ಯರು. ದೇಶದ ಅತ್ಯಂತ ಜವಾಬ್ದಾರಿ ಸಂಸ್ಥೆಯಾದ ಸಂಸತ್ತಿನಲ್ಲಿ ಕಾಂಗ್ರೆಸ್ ನಾಯಕ ಸಂಜಯ ಗಾಂಧಿ ಮಾಡುತ್ತಿರುವ ಕೆಲಸವಾದರೂ ಏನು? ತನ್ನ ತಾಯಿಯೇ ಅಧ್ಯಕ್ಷೆಯಾಗಿರುವ ಕಾಂಗ್ರೆಸ್ ಪಕ್ಷದ ಟಿಕೆಟ್ಟುಗಳನ್ನು ತನ್ನ ಹಲವಾರು ಯುವ ಗೆಳೆಯರಿಗೆ ಕೊಡಿಸಿ ಕಳೆದ ಲೋಕಸಭಾ ಚುನಾವಣೆಗಳಲ್ಲಿ ಅವರು ಗೆದ್ದು ಬರುವಂತೆ ಸಂಜಯಗಾಂಧಿ ಮಾಡಿದರು. ಸಂಜಯನ ಸ್ನೇಹಿತರ ಸಂಖ್ಯೆ ಈಗ ಸಂಸತ್ತಿನಲ್ಲಿ ಸುಮಾರು ಎಪ್ಪತ್ತು. ಈ ಯುವ ಸೇನೆಯನ್ನು ತನ್ನ ಸುತ್ತಲೂ ಕೂರಿಸಿಕೊಂಡು ಸಂಜಯ ಮಾಡುವ ಕೆಲಸ ಅತ್ಯಂತ 'ರಚನಾತ್ಮಕ'ವಾದದ್ದು! ಸಿ. ಪಿ. ಐ. (ಎಂ)ನ ನಾಯಕರಾದ ಕಾಂ. ಸಮರ್ ಮುಖರ್ಜಿ, ಕಾಂ. ಜ್ಯೋತಿರ್ಮಯಿ ಬಸು ಹಾಗೂ ಕಾಂ. ಸೋಮನಾಥ್ ಚಟರ್ಜಿ ಮಾತನಾಡಲು ಎದ್ದಾಗಲೆಲ್ಲಾ ಜೋರಾಗಿ ಟೇಬಲ್ ಗುದ್ದುತ್ತಾ ಗದ್ದಲ ಮಾಡುವುದೇ ಸಂಜಯ ಮತ್ತು ಆತನ ಯುವ ಸೇನೆ ಮಾಡುತ್ತಿರುವ 'ರಚನಾತ್ಮಕ' ಕೆಲಸ. ಈ ವಿಷಯವನ್ನು ಕಾಂ. ಸಮರ್ ಮುಖರ್ಜಿ ಬೆಂಗಳೂರಿನಲ್ಲಿ ಇತ್ತೀಚೆಗೆ ತಿಳಿಸಿದರು. ಈ 'ರಾಷ್ಟ್ರನಾಯಕ' ಮತ್ತು ಆತನ ಗೆಳೆಯರು ತನಗೂ ಮಾತನಾಡಲು ಅವಕಾಶವನ್ನೇ ಕೊಡುವುದಿಲ್ಲ ಎಂದು ಮಾಜಿ ಮಂತ್ರಿ ಕೈಗಾರಿಕಾ ಜಾರ್ಜ್ ಫರ್ನಾಂಡೀಸ್ ಕೂಡ ಲಂಡನ್ನಿನಲ್ಲಿ ಇತ್ತೀಚೆಗೆ ಸುದ್ದಿಗಾರರಿಗೆ ತಿಳಿಸಿರುವುದನ್ನು ಇಲ್ಲಿ ಗಮನಿಸಬಹುದು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR · M. K. BHAT